ಕರ್ನಾಟಕ ವಿಧಾನ ಸಭೆ

ಮಂಗಳವಾರ 9ನೇ ಜುಲೈ 1996ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11- 10 ಗಂಟೆಗೆ

ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ರಮೇಶ್ ಕುಮಾರ್ ಅವರು

ಪೀಠವನ್ನು ಅಲಂಕರಿಸಿದ್ದರು.

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ, ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟು ಬಿಟ್ಟಿದ್ದಾರೆ. ಇವತ್ತು ಬೆಳಿಗ್ಗೆಯಿಂದ ಕಪಿಲಾ ನದಿಯಿಂದ ಸುಮಾರು ಮೂರು ಟಿ.ಎಂ.ಸಿ. ನೀರು ಹರಿದು ಹೋಗುತ್ತಿದೆ. ಅದು ಬೇಜವಾಬ್ದಾರಿತನ. ಇಲ್ಲಿ ವಿರೋಧ ಪಕ್ಷಗಳ ಮುಖಂಡರುಗಳು, ಈ ರಾಜ್ಯದ ವಿಧಾನ ಸಭೆ ಇವುಗಳನ್ನು ಯಾರೂ ಕೇಳುವವರಿಲ್ಲ. ಈ ಸರ್ಕಾರ ಅವರುಗಳನ್ನು ಕಾಲಕಸ ಮಾಡಿದೆ. ಪ್ರಧಾನ ಮಂತ್ರಿಯವರು ಈ ಸರ್ಕಾರವನ್ನು ಕಾಲ ಕಸವಾಗಿ ಕಂಡಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: - ಸರ್ಕಾರದವರು ಇವತ್ತು ಐದು ಟಿ.ಎಂ.ಸಿ. ನೀರನ್ನು ಬಿಡುವುದಕ್ಕೆ ಏಕಾಏಕಿ ತೀರ್ಮಾನ ತೆಗೆದುಕೊಂಡಿದ್ದಾರೆ. ಬಹುಶಃ ಈ ಶಾಸನ ಸಭೆಯಲ್ಲಿ ಅದನ್ನು ಕೇಳುವವರಿಲ್ಲ ಎಂದು ಕಾಣುತ್ತದೆ. ನಿನ್ನೆ ಎಲ್ಲಾ ವಿರೋಧ ಪಕ್ಷಗಳ ನಾಯಕರ ಸಭೆಯನ್ನು ಕರೆದು ಜಲಾಶಯದಲ್ಲಿ ನೀರಿಲ್ಲ, ನೀರನ್ನು ಬಿಡುವಂಥ ಪರಿಸ್ಥಿತಿ ಉದ್ಭವವಾಗುವುದಿಲ್ಲ ಎನ್ನುವಂಥ ಮಾತನ್ನು ಹೇಳಿದ್ದರು. ಆದರೆ ಪ್ರಧಾನ ಮಂತ್ರಿಯವರ ಒತ್ತಡಕ್ಕೆ ಮಣಿದು ಇವತ್ತು ನೀರನ್ನು ಬಿಡುತ್ತಿರುವುದು ಅಕ್ಷಮ್ಯ ಅಪರಾಧ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಒಬ್ಬೊಬ್ಬರಾಗಿ ಹೇಳಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಧ್ಯಕ್ಷರೇ, ನಿನ್ನೆ ದಿವಸ ವಿರೋಧ ಪಕ್ಷದ ನಾಯಕರ ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ಏನು ಹೇಳಿದರು ಎಂದರೆ ನಮ್ಮ ಜಲಾಶಯದಲ್ಲಿ ನೀರಿಲ್ಲ. ಆದ್ದರಿಂದ ನೀರು ಬಿಡುವ ಪ್ರಶ್ನೆ ಇಲ್ಲ ಎನ್ನುವಂಥ ಮಾತನ್ನು ಹೇಳಿದರು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಕರ್ನಾಟಕ ಸರ್ಕಾರದ ಸೌಂಡೇ ಇರಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾನು ಇವತ್ತು ಅಧ್ಯಕ್ಷರ ಛೇಂಬರಿಗೆ ಹೋಗಿ ಈ ವಿಷಯವನ್ನು ಮೊದಲು ನಾನು ಪ್ರಸ್ತಾಪ ಮಾಡುತ್ತೇನೆ, ಪ್ರಶ್ನೋತ್ತರಕ್ಕೆ ಮುಂಚೆ ಐದು ಟಿ.ಎಂ.ಸಿ. ನೀರನ್ನು ಬಿಟ್ಟಿದ್ದರ ಬಗ್ಗೆ ತಾವು ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವ ಒತ್ತಡದಿಂದ ಈಗಾಗಲೇ ತಮಗೆ ಪತ್ರ ಬರೆದಿದ್ದೇನೆ. ನಿಲುವಳಿ ಸೂಚನೆಯನ್ನು ಕೂಡ ಕೊಟ್ಟಿದ್ದೇನೆ. ಆದ್ದರಿಂದ ದಯವಿಟ್ಟು ಮೊದಲು ತಾವು ನಮಗೆ ಅವಕಾಶ ಕೊಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಧ್ಯಕ್ಷರೇ, ದಯಮಾಡಿ ತಮ್ಮಲ್ಲಿ ವಿನಂತಿ ಮಾಡುವುದು ಏನೆಂದರೆ, ಸದನದ ಕಾರ್ಯಕಲಾಪಗಳನ್ನು ಮಾಡುವಂಥ ಕಾಲದಲ್ಲಿ ಇವತ್ತು ಈ ರೀತಿಯ ತೀರ್ಮಾನ ತೆಗೆದುಕೊಂಡಿರುವುದು ಅಕ್ಷಮ್ಯ ಅಪರಾಧ. ಕರ್ನಾಟಕದ ಜನಗಳಿಗೆ ಮಾಡಿರತಕ್ಕಂಥ ದ್ರೋಹ. ಪ್ರಧಾನ ಮಂತ್ರಿಯವರ ಒತ್ತಡಕ್ಕೆ ಮಣಿದು, ಅಲ್ಲಿ ಪ್ರಧಾನ ಮಂತ್ರಿಯವರ ಕುರ್ಚಿ ಉಳಿಯಬೇಕು, ಇಲ್ಲಿ ನಿಲುವಳಿ ಸೂಚನೆ ನಡೆಯಬೇಕು. ಅದಕ್ಕಾಗಿ ರಾಜ್ಯದ ಜನರ ಹಿತ ಹಾಳಾಗಿ ಹೋದರೂ ಪರವಾಗಿಲ್ಲ. ಇದನ್ನು ಸಹಿಸಲು ಆಗುವುದಿಲ್ಲ. ಅದು ಸರಿಯಲ್ಲ. ಅದಕ್ಕೆ ಬೆಂಬಲ ಇಲ್ಲದಿದ್ದರೂ ಪ್ರಧಾನ ಮಂತ್ರಿಯವರ ಒತ್ತಡಕ್ಕೆ ಮಣಿದು ಈ ರಾಜ್ಯದ ಮುಖ್ಯ ಮಂತ್ರಿಗಳು ನಡೆಯುವುದಾದರೆ, ಪ್ರಧಾನ ಮಂತ್ರಿಗೆ ಈ ರಾಜ್ಯದ ಹಿತ ಬೇಡ ಎನ್ನುವುದಾದರೆ, ಇವರು ಮುಖ್ಯ ಮಂತ್ರಿ ಸ್ಥಾನ ಉಳಿಸಿಕೊಳ್ಳುವುದಕ್ಕೆ ಮಾಡಿದರೆ, ನಾವು ಅದನ್ನು ಸಹಿಸುವುದಕ್ಕೆ ಆಗುವುದಿಲ್ಲ. ಪ್ರಧಾನ ಮಂತ್ರಿಯವರ ನಿರ್ದೇಶನದಂತೆ ಇವರು ನಡೆಸುವುದಾದರೆ ಅದು ರಾಜ್ಯದ ಜನರಿಗೆ ಮಾಡಿರುವ ದ್ರೋಹ.

ಶ್ರೀ ವಾಟಾಳ್ ನಾಗರಾಜ್:- ನಿನ್ನೆ ವಿರೋಧ ಪಕ್ಷದ ಮುಖಂಡರುಗಳ ಸಭೆಯನ್ನು ಏಕೆ ಕರೆಯಬೇಕಾಗಿತ್ತು, ಯಾವ ಉದ್ದೇಶಕ್ಕೆ ಕರೆಯಬೇಕಾಗಿತ್ತು. ಈ ಸರ್ಕಾರ ಇಷ್ಟೊಂದು ಬೇಜವಾಬ್ದಾರಿತನದಿಂದ ಇರಲು ಕಾರಣವೇನು? ನಾವು ಅಲ್ಲಿ ಮಾತನಾಡಬಹುದಿತ್ತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಾನು ಸರ್ಕಾರದ ನೀತಿಯನ್ನು ಕಠೋರವಾಗಿ ವಿರೋಧಿಸುತ್ತೇನೆ. ಈ ಸರ್ಕಾರ ರಾಜೀನಾಮೆ ಕೊಡಬೇಕು, ಸರ್ಕಾರ ಒಂದು ನಿಮಿಷವೂ ಉಳಿಯುವುದಕ್ಕೆ ಸಾಧ್ಯವಿಲ್ಲ. ಇದು ಸ್ಪಷ್ಟ. ಇದು ನಮ್ಮ ನಿಲುವು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದು ಅಕ್ಷಮ್ಯ ಅಪರಾಧ. ಪ್ರಧಾನಿಯವರ ಕೈಗೊಂಬೆಯಾಗಿ ಇವತ್ತು ಈ ರಾಜ್ಯದ ಮುಖ್ಯ ಮಂತ್ರಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಇತಿಮಿತಿ ಇದೆ. ನಿನ್ನೆಯ ವಿರೋಧ ಪಕ್ಷಗಳ ನಾಯಕರ ಸಭೆಯಲ್ಲಿ ಜಲಾಶಯದಲ್ಲಿ ನೀರಿಲ್ಲ ಎಂದು ಹೇಳಿದರು.

(ಗೊಂದಲ)

ಅಧ್ಯಕ್ಷರು:- ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ನಿನ್ನೆ ಅನೇಕ ಕಾರ್ಯಕ್ರಮಗಳು ನಮ್ಮ ಮುಂದೆ ಇದ್ದರೂ ಕೂಡ ತಮ್ಮ ಮಾತು ಕೇಳಿ ನಾವು ಕೆ.ಇ.ಬಿ. ವಿಷಯವನ್ನು ಸೌಹಾರ್ದತೆಯಿಂದ (ಅಮಿಕಬಲಿ) ಸೆಟಲ್ ಮಾಡಿದೆವು. ಅದರಲ್ಲಿ ಅವರೂ ಪ್ರತಿಷ್ಠೆ ಮಾಡಲಿಲ್ಲ, ನಾವೂ ಪ್ರತಿಷ್ಠೆ ಮಾಡಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಪ್ರಶ್ನೋತ್ತರವನ್ನು ಬದಿಗೊತ್ತಿ ಇದರ ಮೇಲೆ ಚರ್ಚೆಗೆ ಅವಕಾಶ ಕೊಡಿ. ಇದು ಮಹತ್ತರವಾದಂಥಾದ್ದು. ನೀವು ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದರ ಬಗ್ಗೆ ದೀರ್ಘವಾದಂಥ ಚರ್ಚೆಯಾಗಬೇಕು. ಇಲ್ಲದಿದ್ದರೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:- ಒಂದೇ ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ದಯಮಾಡಿ ನಾನು ಹೇಳುವುದನ್ನು ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ.

ಅಧ್ಯಕ್ಷರು:- ಪುಟ್ಟಣ್ಣಯ್ಯನವರೇ ತಾವು ಕುಳಿತುಕೊಳ್ಳಿ. ವಾಟಾಳ್‌ರವರೇ ಕುಳಿತುಕೊಳ್ಳಿ. ನಾನು ಏನು ಹೇಳುತ್ತೇನೆಂದರೆ, ತಾವೆಲ್ಲರೂ ಕೂಡ ಹಿರಿಯ ನಾಯಕರುಗಳಾಗಿದ್ದೀರಿ. ತಾವು ಏನೇನು ಹೇಳಬೇಕಾಗಿದೆಯೋ ಅದನ್ನು ಒಬ್ಬೊಬ್ಬರಾಗಿ ಎದ್ದು ಹೇಳಿ, ಕೇಳುವುದಕ್ಕೆ ನಾನು ತಯಾರಾಗಿದ್ದೇನೆ. ದಯಮಾಡಿ ಒಂದು ನಿಮಿಷ ಶಾಂತಿ. ನೀವೆಲ್ಲರೂ ಒಟ್ಟಿಗೆ ಎದ್ದು ಕೇಳಿದರೆ ನೀವು ಹೇಳುವುದು ನನಗೂ ಅರ್ಥವಾಗುತ್ತಿಲ್ಲ, ಅವರಿಗೂ ಬರೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ, ಇವರಿಗೂ ಬರೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ತಾವು ಬಂದಿರಿ, ಬಂದ ತಕ್ಷಣ ಖರ್ಗೆಯವರೂ ಎದ್ದು ನಿಂತುಕೊಂಡರು, ವಾಟಾಳರೂ

ಎದ್ದು ನಿಂತರು. ನಾನು ಪ್ರಶ್ನೋತ್ತರವನ್ನು ತೆಗೆದುಕೊಳ್ಳಲೇ ಬೇಕು ಎಂದು ಬೆಲ್ ಹೊಡೆದು ತಕ್ಷಣವೇ ಪ್ರಶ್ನೆಗಳಿಗೆ ಹೋಗುವ ಅರ್ಜೆಂಟ್‌ನಲ್ಲಿ ಇಲ್ಲ. ನೀವು ಶಾಸನ ಸಭೆಯಲ್ಲಿ ಪ್ರತಿಪಕ್ಷದ ಎಲ್ಲಾ ಮುಖಂಡರುಗಳು ಬಹಳ ಗಂಭೀರವಾದಂಥ ವಿಚಾರ ಎಂದು ಹೇಳಿದರೆ ಯಾವಾಗಲೂ ಕೂಡ ನಿಮ್ಮ ಜೊತೆ ಸಹಕರಿಸುವುದಕ್ಕೆ ನಾನು ತಯಾರಾಗಿದ್ದೇನೆ. ತಾವು ಏನು ವಾದ ಮಂಡಿಸಬೇಕು ಎಂದಿದ್ದೀರಿ, ಅದನ್ನು ದಯಮಾಡಿ ಒಬ್ಬೊಬ್ಬರಾಗಿ ಮಾಡಿದರೆ ಎಲ್ಲರಿಗೂ ಕೇಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ನಾನು ಏನು ಹೇಳುತ್ತೇನೆ ಎಂದರೆ, ತಾವು ಏನು ಪ್ರತಿಪಾದನೆ ಮಾಡಬೇಕು ಎಂದಿದ್ದೀರೋ, ದಯಮಾಡಿ ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಶಾಂತ ರೀತಿಯಿಂದ ಮಾಡಿ, ಅಷ್ಟು ಹೊತ್ತಿಗೆ ಅವರೂ ಬರಲಿ. ಆಮೇಲೆ ಮೊನ್ನೆ ನೀವು ವಿದ್ಯುತ್ ದರಕ್ಕೂ ಅದೇ ಬಟ್ಟೆ ತಂದಿದ್ದಿರಿ. ಇವತ್ತು ಕಾವೇರಿಗೂ ಅದನ್ನೇ ತಂದಿದ್ದೀರಿ. ಬೇರೆ ಹೊಸದು ತರಬೇಕು.

ಶ್ರೀ ವಾಟಾಳ್ ನಾಗರಾಜ್:- ಕಪ್ಪುಬಟ್ಟೆ ಒಂದೇ ಇರುವುದು. ವಿದ್ಯುತ್ ದರಕ್ಕೆ ಕೆಂಪು ಬಟ್ಟೆ ತರುವುದೇ ಹೇಳಿ. ತೆಗೆದುಕೊಂಡು ಬನ್ನಿ ಎಂದರೆ ಅದನ್ನೆ ತೆಗೆದುಕೊಂಡು ಬರುತ್ತೇನೆ.

ಅಧ್ಯಕ್ಷರು:- ಕಪ್ಪು ಬಟ್ಟೆಯನ್ನೇ ತೆಗೆದುಕೊಂಡು ಬನ್ನಿ. ದಯಮಾಡಿ ನನ್ನ ಮಾತು ಕೇಳಿ. ಕಪ್ಪೇ ತರಬೇಕಾದುದು. ಒಂದೊಂದು ವಿಷಯಕ್ಕೆ ತಂದಾಗಲೂ ಕೂಡ ಹೊಸ ಬಟ್ಟೆ ತರಬೇಕು. ಇದು ಹಳೆಯದನ್ನು ತಂದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ತಮಗೆ ನಾನು ಮನವಿ ಮಾಡುತ್ತೇನೆ. ಇದು ಹಾಸ್ಯವಲ್ಲ. ತಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. ನಮಗೆ ಬಹಳ ನೋವಾಗಿದೆ. ಇವತ್ತು ಮೈಸೂರು ಜಿಲ್ಲೆಯ ಜನತೆಗೆ, ರೈತರಿಗೆ ನೀರು ಇಲ್ಲದೇ ಇರುವಂಥ ಪರಿಸ್ಥಿತಿಯಲ್ಲಿ ಕಪಿಲಾ ನದಿಯಿಂದ ನೀರು ಬಿಟ್ಟಿರತಕ್ಕಂಥಾದ್ದು ಇಡೀ ರಾಜ್ಯದ ಜನತೆಗೆ ಮಾಡಿರತಕ್ಕಂಥ ಅನ್ಯಾಯ.

ಅಧ್ಯಕ್ಷರು:- ಈಗ ಪ್ರತಿಪಕ್ಷದ ನಾಯಕರು ಮಾತನಾಡಲಿ. ನಾನು ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ರಾಜ್ಯಕ್ಕೆ ಆಗಿರತಕ್ಕಂಥ ಅನ್ಯಾಯವನ್ನು ಪ್ರತಿಭಟಿಸಿ ಕಪ್ಪು ಬಾವುಟ ಹಿಡಿದು ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಗೆ ಬಂದು ನಿಂತರು)

ಅಧ್ಯಕ್ಷರು:- ವಾಟಾಳರೇ, ನನ್ನ ಮಾತು ಕೇಳಿ. ನಾನು ಏನು ಹೇಳುತ್ತೇನೆ ಎಂದರೆ......

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಏನಾದರೂ ವಿಷಯ ಬಂದಾಗ ಪ್ರೊಸಿಜರ್ ಪ್ರಕಾರ ಹೋಗಬೇಕು. ಇಲ್ಲ ಅಂದರೆ ನಾವು ಬರೆದು ಕೊಡುವುದೇ ಬೇಡ. ನಾನು ಬೆಳಿಗ್ಗೆ 9.30ಕ್ಕೇ ಬಂದು ಒಂದು ತಾಸು ಮುಂಚೆ ಕೊಡಬೇಕು ಎಂದು ಕಾದು, ಬರೆದು ಕೊಟ್ಟು ಆದಮೇಲೆ ಹೀಗೆ ಮಾಡಿದರೆ ರೂಲ್ಸ್‌ಗೆ ಏನು ಬೆಲೆ ಇದೆ? ಏಕೆ ನಾನು ಬರೆದು ಕೊಡಬೇಕು?

ಶ್ರೀ ಬಿ.ಎಸ್.ಯಡಿಯೂರಪ್ಪ:- ಸ್ವಾಮಿ, ಪ್ರತಿಪಕ್ಷದ ನಾಯಕನಾಗಿ ನಾನು ಇವತ್ತು ಇಲ್ಲಿ ಮಾತನಾಡುತ್ತಿದ್ದೇನೆ. ಅತ್ಯಂತ ಪ್ರಾಮುಖ್ಯವಾದಂಥ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೋಸ್ಕರ ನಾನು ಇಲ್ಲಿ ನಿಂತಿದ್ದೇನೆ. ನಾನು ತಮ್ಮಲ್ಲಿ ವಿನಂತಿ ಮಾಡುವಂಥಾದ್ದು ಏನೆಂದರೆ,........

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, We don't want to follow the rules ಯಾರು ಬೇಕಾದರೂ, ಯಾವಾಗ ಬೇಕಾದರೂ, ಏನು ಬೇಕಾದರೂ ರೈಸ್ ಮಾಡಬಹುದಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇವರು ಜವಾಬ್ದಾರಿ ಸ್ಥಾನದಲ್ಲಿದ್ದು ಈ ರೀತಿ ಮಾತನಾಡಿದರೆ ನಾನು ಏನು ಹೇಳಬೇಕು. ನೀವು ಮಾತನಾಡಬೇಕು ಎಂದಿರಿ, ಯಾವುದು ಅವಕಾಶವಿದೆ ಅದಕ್ಕೆ ನಾನು ಜೊತೆಜೊತೆ ಮಾತನಾಡುತ್ತೇನೆ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಪ್ರಸ್ತಾಪ ಮಾಡುತ್ತಿದ್ದೇನೆ, ಇದು ಅತ್ಯಂತ ಪ್ರಾಮುಖ್ಯವಾದಂಥ ವಿಷಯ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:- ಕಾಂಗ್ರೆಸ್ಸಿನವರು ಆಡಳಿತ ಪಕ್ಷದಲ್ಲಿ ಇದ್ದಾಗ ಮಾಡಿದಂಥ ಕೆಲಸವನ್ನು ಈಗ ಅವರು ಜನತಾ ದಳದಲ್ಲಿ ಮಾಡುತ್ತಿದ್ದಾರೆ. ಈಗ ಇವರು ವಿರೋಧ ಪಕ್ಷದಲ್ಲಿದ್ದು ವಿರೋಧ ಮಾಡುತ್ತಿದ್ದಾರೆ. ಇವರಿಗೆ ಏನು ಹಕ್ಕು ಇದೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾವು ನಿಮ್ಮಿಂದ ಬುದ್ಧಿ ಕಲಿಯಬೇಕಾಗಿಲ್ಲ. Don't tell all that. ನಿಮಗೆ ಹಕ್ಕು ಇದೆ, ನೀವು ಮಾತನಾಡಿ. ಇಲ್ಲ ಎಂದು ಹೇಳುವುದಿಲ್ಲ. ಆದರೆ ಯಾರ್‍ಯಾರು ನೋಟೀಸ್ ಕೊಟ್ಟಿದ್ದಾರೆ ಅದರ ಪ್ರಕಾರ ಹೋಗಬೇಕು. ಆ ರೀತಿ ಹೋಗಲು ಅವರು ತೀರ್ಮಾನ ಮಾಡಲಿ.

ಅಧ್ಯಕ್ಷರು:- ವಾಟಾಳ್‌ರವರೇ, ತಾವು ಈ ವಿಚಾರದಲ್ಲಿ ತಮ್ಮ ವಾದ ಮಂಡಿಸಬೇಕಾಗಿದೆ. ಅದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ. ಅಲ್ಲಿಂದ ಇಲ್ಲಿಗೆ ಬರುವುದು ಬೇಡ. ದಯಮಾಡಿ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ತಮ್ಮ ಸರದಿ ಬಂದಾಗ ಅವಕಾಶ ಕೊಡುತ್ತೇನೆ. ತಾವು ಏನೆಲ್ಲಾ ಹೇಳಬೇಕು ಎಂದಿದ್ದೀರಿ ದಯಮಾಡಿ ಎಲ್ಲಾ ಹೇಳಿ. ಆಮೇಲೆ ನೀವು ಏನು ನಿರ್ಣಯವನ್ನು ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ. ಅದಕ್ಕೆ ನೀವು ಸ್ವತಂತ್ರರಿದ್ದೀರಿ. ಅದು ನಿಮ್ಮ ಹಕ್ಕು. ಖರ್ಗೆಯವರೇ, ತಾವು ರೂಲ್ಸ್ ವಿಚಾರ ಪ್ರಸ್ತಾಪ ಮಾಡಿದಿರಿ. ನಿಲುವಳಿ ಸೂಚನೆಗೆ ತಾವು ನೋಟೀಸ್ ಕೊಟ್ಟಾಗ, ಸಾಮಾನ್ಯವಾಗಿ ನಮ್ಮ ನಿಯಮಾವಳಿಯ ಪ್ರಕಾರ ಪ್ರಶ್ನೋತ್ತರ ವೇಳೆ ಆದ ಮೇಲೆ ಮೊದಲು ಯಾರು ನೋಟೀಸ್ ಕೊಟ್ಟಿರುತ್ತಾರೆ, ಅವರಿಗೆ ನಾನು ಅವಕಾಶ ಕೊಡಬೇಕು. ಇವತ್ತು ಒಂದು ವಿಶೇಷವಾದಂಥ ಪರಿಸ್ಥಿತಿಯಲ್ಲಿ ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭ ಮಾಡುವುದಕ್ಕೆ ಮೊದಲೇ ತಾವೆಲ್ಲರೂ ಒಟ್ಟಿಗೆ ಎದ್ದು ನಿಂತಿದ್ದೀರಿ. ನಾನು ತಮ್ಮಲ್ಲಿ ಏನು ವಿನಂತಿ ಮಾಡುತ್ತೇನೆ, ಎಂದರೆ ತಾವು ಹೇಳಿದ್ದನ್ನೇ ನಾನೂ ಹೇಳುತ್ತೇನೆ.

(ಸದಸ್ಯರಾದ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅದು ನನಗೆ ಗೊತ್ತು. ಅದು ಗೊತ್ತಿದ್ದೇ ನಾನು ಇನ್ನೊಂದು ಲೆಟರ್ ಕೊಟ್ಟೆ. ನಿಯಮಾವಳಿ ಪ್ರಕಾರ ಪ್ರಶ್ನೋತ್ತರ ವೇಳೆ ಆದಮೇಲೆ ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ವಿಶೇಷವಾದಂಥ ಈ ಸಂದರ್ಭದಲ್ಲಿ ತಾವು ಪ್ರಶ್ನೋತ್ತರವನ್ನು ಬದಿಗಿಟ್ಟು ಚರ್ಚೆಗೆ ಮೊದಲು ಅವಕಾಶ ಮಾಡಿಕೊಡಿ ಎಂದು ಇನ್ನೊಂದು ಲೆಟರ್

ನಾನು ಕೊಟ್ಟಿದ್ದು. ನಾನು ಅದನ್ನು ಬಿಟ್ಟು ಹೋಗಿಲ್ಲ.

ಅಧ್ಯಕ್ಷರು:- ನಾನು ಈಗಲೂ ಕೂಡ ಅದನ್ನೇ ತಮ್ಮೆಲ್ಲರಿಗೂ ಹೇಳುತ್ತೇನೆ. ದಯಮಾಡಿ ಕೇಳಿ. ಪ್ರತಿಪಕ್ಷದ ನ್ಯಾಯಕರಾದಿಯಾಗಿ ನಾನು ತಮ್ಮೆಲ್ಲರಿಗೂ ವಿನಂತಿ ಮಾಡುತ್ತಿದ್ದೇನೆ. ಪ್ರಶ್ನೋತ್ತರವನ್ನು ತೆಗೆದುಕೊಂಡು, ಅದು ಆದಮೇಲೆ ಈ ವಿಚಾರ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳುವುದಾದರೆ, I will be happy. Then I will be very thankful to you. ಈಗ ಪ್ರಶ್ನೋತ್ತರ ಪ್ರಾರಂಭ ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ವಿಷಯದ ಬಗ್ಗೆ.......

ಅಧ್ಯಕ್ಷರು:- ನೀವು ಮೊದಲೇ ಪ್ರಸ್ತಾಪ ಮಾಡುತ್ತೀರೆಂದರೆ ನಾನು ಅದನ್ನು ಒಂದು ದೊಡ್ಡ ಪ್ರತಿಷ್ಠೆ ಮಾಡಿಕೊಂಡು ಸಮಯ ವ್ಯರ್ಥ ಮಾಡುವುದಕ್ಕೆ ತಯಾರಾಗಿಲ್ಲ. ನಾನು ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತುತ್ತೇನೆ ಎಂದು ಹೇಳುತ್ತಾ ಇಲ್ಲ. ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತುತ್ತೇನೆಯೋ ಅಥವಾ ಈಗಲೇ ತೆಗೆದುಕೊಳ್ಳುತ್ತೇನೆಯೋ ನನ್ನ ನಿರ್ಧಾರವನ್ನು ನಾನು ಕಾದಿರಿಸಿಕೊಳ್ಳುತ್ತೇವೆ. ತಾವು ಏನು ಮಾತನಾಡಬೇಕೆಂದು ಇದ್ದೀರಿ ದಯಮಾಡಿ you can express your views, then I will give my decision. But this does not meat that I have pushed aside the Question Hour and I have allowed your notice, I am just listening to you.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕಾವೇರಿ ನೀರನ್ನು ಬಿಟ್ಟಿರುವ ಬಗ್ಗೆ ನಾನು ಮೊದಲೇ ಸೂಚನೆ ಕೊಟ್ಟಿದ್ದೇನೆ......?

ಶ್ರೀ ಬಿ.ಎಸ್.ಯಡಿಯೂರಪ್ಪ:- ಸರ್, ಖರ್ಗೆಯವರೇ ಮೊದಲು ಮಾತನಾಡಲಿ. ನನಗೇನೂ ಅರ್ಥವಾಗುತ್ತಾ ಇಲ್ಲ. ಹಿರಿಯ ಸದಸ್ಯರಾದ ಖರ್ಗೆ ಅಂತಹವರೇ ಈ ತರಹ ಮಾತನಾಡಿದರೆ ಹೇಗೆ.

ಅಧ್ಯಕ್ಷರು:- ನೀವು ಅಪೋಸಿಷನ್‌ರವರು ಕೋಆರ್ಡಿನೇಷನ್ ಇರಬೇಕು. ಈಶ್ವರಪ್ಪನವರೆ, ನೀವು ಸದಾ ಕಾಲ ಅವರ ಜೊತೆಯಲ್ಲಿ ಜಗಳ ಮಾಡಿಕೊಂಡರೆ ಹೇಗೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಜನತಾದಳ ಮತ್ತು ಕಾಂಗ್ರೆಸ್ ದೆಹಲಿ ಮತ್ತು ಇಲ್ಲಿ ಕೋಆರ್ಡಿನೇಷನ್ ಇರುವಾಗ ನಮಗೇನು ಹೇಳುತ್ತೀರಿ? ನಮ್ಮದು ಅಲ್ಲಿಯೂ ವಿರೋಧ ಪಕ್ಷ, ಇಲ್ಲಿಯೂ ವಿರೋಧ ಪಕ್ಷ.

ಅಧ್ಯಕ್ಷರು:- ನೀವು ಒಂದೊಂದು ಊರಿಗೆ ಒಂದೊಂದು ರೀತಿ ಇಟ್ಟುಕೊಳ್ಳಬೇಕು. ಎಲ್ಲಾ ಕಡೆಗೂ ಡೆಲ್ಲಿ ಬೆಂಗಳೂರು ಎಲ್ಲಾ ಒಂದೇ ಮಾಡಿದರೆ, ಡೆಲ್ಲಿಯಲ್ಲಿ ಓಡಾಡುವುದಕ್ಕೆ ಆಗದಿರುವಷ್ಟು ಸೆಕೆ. ಇಲ್ಲಿ ಸ್ವಲ್ಪ ತಂಪು ಆಗಿದೆ. ಒಂದೊಂದು ಕಡೆ ಒಂದೊಂದು ನಮೂನೆಯಲ್ಲಿ ಹೋಗಬೇಕು. ನೀವು ಎಲ್ಲಾ ಊರಿಗೂ ಒಂದೇ ತಂತ್ರ ಮಾಡಿದರೆ ಹೇಗಾಗುತ್ತದೆ?

★ **ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಕಾವೇರಿ ಜಲಾನಯನ ಪ್ರದೇಶದ ಬಗ್ಗೆ ಅಲ್ಲಿರುವಂಥ ನ್ಯಾಯಾಧೀಶರೂ ಆಗಿರುವಂಥ ಅಧ್ಯಕ್ಷರು ರಾಜೀನಾಮೆ ಕೊಟ್ಟ ಪರಿಣಾಮವಾಗಿ ಮತ್ತೆ ನಾವು ಟ್ರಿಬ್ಯುನಲ್ ಮುಂದೆ ಹೋಗುವಂಥದ್ದು ಈ ತಿಂಗಳ

11- 12ರಂದು ಇದ್ದಂಥ ಪ್ರಸ್ತುತ ಸಂದರ್ಭದಲ್ಲಿ ನಮ್ಮ ನಿಲುವು ಏನು ಇರಬೇಕು ಎಂದು ಚರ್ಚೆ ಮಾಡುವಂಥ ಹಿನ್ನಲೆಯಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ವಿರೋಧ ಪಕ್ಷದ ನಾಯಕರ ಸಭೆಯನ್ನು ಕರೆದಿದ್ದರು. ಅಲ್ಲಿ ನಾವು ಚರ್ಚೆ ಮಾಡುವಂಥ ಕಾಲದಲ್ಲಿ ಬಹಳ ಸ್ಪಷ್ಟವಾಗಿ ಇವತ್ತು ಯಾವ ಕಾರಣಕ್ಕೂ ಸಹ ಈ ಸದನದ ಈ ಮನೆಯಲ್ಲಿ ತೆಗೆದುಕೊಂಡಂಥ ಸರ್ವಾನುಮತದ ನಿರ್ಣಯ. ಮತ್ತೆ 11 ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ಟ್ರಿಬ್ಯುನಲ್ ಆದೇಶ ಮಾಡಿ ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಪ್ರಧಾನ ಮಂತ್ರಿಯವರ ಮಧ್ಯೆ ಪ್ರವೇಶ ಮಾಡಿ ಆ ತಜ್ಞರ ಸಮಿತಿ ಬಂದು 5 ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ಆದೇಶ ಮಾಡಿದಂಥ ಕಾಲದಲ್ಲಿ ಸರ್ವಾನುಮತದ ನಿರ್ಣಯವಾಯಿತು. ಅಲ್ಲಿ ರಾಷ್ಟ್ರೀಯ ಜಲನೀತಿಯನ್ನು ರೂಪಿಸುವವರೆಗೆ ಯಾವ ಕಾರಣಕ್ಕೂ ಸಹ ನಾವು ಟ್ರಿಬ್ಯುನಲ್ ಮುಂದೆ ಹೋಗಬಾರದು ಎನ್ನುವಂಥ ತೀರ್ಮಾನವನ್ನು ಅವತ್ತು ಸರ್ವಾನುಮತದಿಂದ ತೆಗೆದುಕೊಂಡೆವು. ಆ ಸಮಯದಲ್ಲಿ ರಾಜ್ಯದ ಜನರ ಹಿತವನ್ನು ಬಲಿಗೊಟ್ಟು ಜಲಾಶಯಗಳಲ್ಲಿ ನೀರು ಇಲ್ಲದೇ ಇದ್ದರೂ ಸಹ ಪ್ರಧಾನ ಮಂತ್ರಿಯವರ ಮಾತಿಗೆ ಗೌರವ ಕೊಡಬೇಕು, ನಮ್ಮ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಂಬಂಧಗಳು ಉಳಿಯಬೇಕು, ಅಕ್ಕಪಕ್ಕದ ರಾಜ್ಯದ ಸಂಬಂಧಗಳು ಸೌಹಾರ್ದಯುತವಾಗಿ ಮುಂದುವರಿಯಬೇಕು ಎನ್ನುವ ಕಾರಣಕ್ಕೋಸ್ಕರ ಆ ಸಂದರ್ಭದಲ್ಲಿ ನಾವು ಒಪ್ಪಿಗೆಯನ್ನು ಕೊಟ್ಟೆವು. ಆದರೆ ಟ್ರಿಬ್ಯುನಲ್ ಆರ್ಡರ್ ಅನ್ನು ರಿವ್ಯೂ ಮಾಡಬೇಕೆಂದು ಹೇಳಿ ಒಂದು ರಿವ್ಯೂ ಪಿಟಿಷನ್ ಸಹ ಕಳೆದ 20 ದಿವಸಗಳ ಹಿಂದೆ ಈ ಸರ್ಕಾರದ ಸನ್ಮಾನ್ಯ ಅಧ್ಯಕ್ಷರೇ ಹಾಕಿದರು. ಆ ಸಮಯದಲ್ಲಿ ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಬಹುಶಃ ಈ ಒಂದು ಟ್ರಿಬ್ಯುನಲ್ ಮುಂದೆ ಹೋಗುವಂಥ ಅಗತ್ಯವಿರಲಿಲ್ಲ. ಬೇಕಿದ್ದರೆ ನಾವು ಸುಪ್ರೀಂಕೋರ್ಟ್‌ನ ರಕ್ಷಣೆಗೆ ಅಲ್ಲಿಗೆ ಹೋಗಬೇಕಾಗಿತ್ತು. ಈಗ ಏನು ಪ್ರಶ್ನೆ ಎಂದರೆ, ನಿನ್ನೆಯ ದಿವಸ ನೀವು ವಿರೋಧ ಪಕ್ಷದ ನಾಯಕರ ಸಭೆಯನ್ನು ಕರೆದಿದ್ದೀರಿ. ನಾವು ಅಲ್ಲಿ ಸರ್ವಾನುಮತದಿಂದ ಚರ್ಚೆಯನ್ನು ಮಾಡಿದೆವು. ವಾಸ್ತವಿಕ ಸ್ಥಿತಿ ಎಲ್ಲವನ್ನೂ ನಿಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದೆವು. ಇನ್ನು ಮುಂದೆ ಸದನದಲ್ಲಿ ಹಿಂದೆ ತೆಗೆದುಕೊಂಡಂಥ ನಿರ್ಣಯಕ್ಕೆ ನೀವು ಬದ್ಧರಾಗಿರಬೇಕು ಎನ್ನುವಂಥ ಮಾತನ್ನು ನಾವು ಹೇಳಿದೆವು. ಸನ್ಮಾನ್ಯ ಜೆ.ಹೆಚ್.ಪಟೇಲರು ರಾಜ್ಯದ ಮುಖ್ಯ ಮಂತ್ರಿ ಆದಮೇಲೆ ಅನಿವಾರ್ಯವಾಗಿ ಟ್ರಿಬ್ಯುನಲ್ ಮುಂದೆ ಹೋಗಬೇಕಾಗುತ್ತದೆ, ಟ್ರಿಬ್ಯುನಲ್ ಬಾಯ್‌ಕಾಟ್ ಮಾಡಲಿ ಎಂದು ಹೇಳುವಂಥಾದ್ದು ಸಹ ಅದು ನಮಗೆ ಗೌರವ ತರುವಂಥ ಸಂಗತಿ ಅಲ್ಲ, ಸರ್ವಾನುಮತದಿಂದ ಎಲ್ಲಾ ಪಕ್ಷದವರು ತೆಗೆದುಕೊಂಡ ನಿರ್ಣಯದ ವಿರುದ್ಧವಾಗಿ ಆ ಮಾತನ್ನು ಮುಖ್ಯ ಮಂತ್ರಿಗಳು ಆಡಬಾರದಾಗಿತ್ತು ಎನ್ನುವಂಥ ಎಚ್ಚರಿಕೆ ಮಾತನ್ನು ನಾವು ಹೇಳಿದ್ದೇವೆ. ಮತ್ತು ನಿನ್ನೆ ನಡೆದಂಥ ಸಭೆಯಲ್ಲಿ ಯಾವ ಸಂದರ್ಭದಲ್ಲಿಯೂ ಈ ರಾಜ್ಯದ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಪ್ರಧಾನ ಮಂತ್ರಿಯವರ ಜೊತೆ ಮಾತುಕತೆಯಾಡಿ ನಿಮಗೆ ಬೇಕಾದಂಥ ತೀರ್ಮಾನವನ್ನು ತೆಗೆದುಕೊಳ್ಳುವಂಥ ಅಧಿಕಾರವನ್ನು ನಾವೇನೂ ಕೊಡಲಿಲ್ಲ. ನಮ್ಮೆಲ್ಲರ ಅಭಿಪ್ರಾಯವನ್ನು ಕೇಳಿದರು. ಚರ್ಚೆಯಾಯಿತು. ಅಲ್ಲಿಗೆ ನಿನ್ನೆಯ ಸಭೆ ಸಮಾಪ್ತಿಯಾಯಿತು. ಇವತ್ತು ನಾವು ಪತ್ರಿಕೆಯನ್ನು ನೋಡುತ್ತಾ ಇದ್ದೇವೆ. ನಮ್ಮ ಜಲಾಶಯಗಳಲ್ಲಿ ನೀರು ಇಲ್ಲದೇ ಇರುವಂಥ ಕಾಲದಲ್ಲಿ ಎಲ್ಲಾ ಜಲಾನಯನ ಪ್ರದೇಶಗಳಲ್ಲಿ ಮಳೆ ಇಲ್ಲದೇ ಇರುವಂಥ ಈ

ಸಂದರ್ಭದಲ್ಲಿ ಒಂದು ರೀತಿಯಲ್ಲಿ ಬರಗಾಲವನ್ನು ಎದುರಿಸುತ್ತಿರುವಂಥ ಸಂದರ್ಭದಲ್ಲಿ ಇದ್ದಕ್ಕಿದ್ದ ಹಾಗೆ ಪ್ರಧಾನಿಯವರ ಒಂದು ಆದೇಶದ ಮೇರೆಗೆ 5 ಟಿ.ಎಂ.ಸಿ. ನೀರನ್ನು ಬಿಡುವುದಕ್ಕೆ ಈ ಸರ್ಕಾರ ಒಪ್ಪಿಕೊಂಡಿದೆ. ಇವತ್ತು ಬೆಳಿಗ್ಗೆ ಶಾಸಕಾಂಗ ಪಕ್ಷದ ಸಭೆಯಲ್ಲಿಯೂ ಸಹ 5 ಟಿ.ಎಂ.ಸಿ. ನೀರನ್ನು ಕಬಿನಿಯಿಂದ ಬಿಡಬೇಕು ಎನ್ನುವಂಥ ತೀರ್ಮಾನವನ್ನು ಮಾಡಿ ಇವತ್ತು ಬೆಳಿಗ್ಗೆಯಿಂದ ನೀರು ಬಿಡುವುದಕ್ಕೆ ಈ ಸರ್ಕಾರ ಕಾರ್ಯಪ್ರವೃತ್ತವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಕೇಳುವಂಥದ್ದು ಏನೆಂದರೆ, ಈ ಮನೆಗೆ ಪಾವಿತ್ರತೆ ಏನು ಉಳಿಯಿತು? ನಿನ್ನೆ ಕರೆದಂಥ ಸಭೆಯಲ್ಲಿ ವಾಸ್ತವಿಕ ಸತ್ಯಸಂಗತಿಯನ್ನು ಹೇಳಬಹುದಾಗಿತ್ತು. ನಿನ್ನೆ ನೀವು ಸಭೆಯಲ್ಲಿ ನಮ್ಮ ಜೊತೆ ಮಾತನಾಡುವಂಥ ಕಾಲದಲ್ಲಿ ಈ ರಾಜ್ಯದ ಮುಖ್ಯ ಮಂತ್ರಿಗಳಿಗೆ ಪ್ರಧಾನ ಮಂತ್ರಿಯವರಿಂದ ಆದೇಶ ಬಂದಿತ್ತೇ? ಆ ರೀತಿಯ ಒತ್ತಡಕ್ಕೆ ಮಣಿಯುವಂಥ ಸಂದರ್ಭ ನಿಮಗೆ ಬಂದಿತ್ತೇ? ನನಗೆ ಗೊತ್ತಿರುವ ಪ್ರಕಾರ ನಿನ್ನೆ ಸಭೆಯು ಮುಕ್ತಾಯವಾಗುವವರೆಗೆ ಆ ರೀತಿಯ ಯಾವುದೇ ಒತ್ತಾಯ ನಿಮಗೆ ಬಂದಿರಲಿಲ್ಲ. ಆದರೆ ಮಧ್ಯಾಹ್ನದ ನಂತರ ಯಾವ ಒಂದು ವಿಶೇಷವಾದಂಥ ಸಂದರ್ಭ ಬಂದು ಈ 5 ಟಿ.ಎಂ.ಸಿ. ನೀರನ್ನು ಬಿಡುವುದಕ್ಕೆ ತಾವು ಒಪ್ಪಿಕೊಂಡಿದ್ದೀರಿ. ಈ ಸದನದಲ್ಲಿ ಕಾರ್ಯಕಲಾಪ ನಡೆಯುವಂಥ ಸಂದರ್ಭದಲ್ಲಿ ಈ ಒಂದು ವ್ಯವಸ್ಥೆಯನ್ನು ಧಿಕ್ಕರಿಸಿ ಈ ರೀತಿ ನೀವು ಆದೇಶವನ್ನು ಕೊಡತಕ್ಕಂಥದ್ದು ಸರಿಯೇ ಎನ್ನುವಂಥ ಪ್ರಶ್ನೆ ಇಲ್ಲಿ ಬರುತ್ತದೆ. ಈಗ ಜನ ಹೊರಗೆ ಮಾತನಾಡುತ್ತಾ ಇದ್ದಾರೆ. ಈ ರಾಜ್ಯದ ಮಾಜಿ ಮುಖ್ಯ ಮಂತ್ರಿಗಳಾಗಿ ಹಾಲಿ ಪ್ರಧಾನ ಆಗಿರುವಂಥ ಈ ಕಾಲದಲ್ಲಿ ನಮ್ಮ ರಾಜ್ಯದ ಹಿತಕ್ಕೆ ಯಾವುದೇ ರೀತಿಯ ಧಕ್ಕೆ ಬರುವುದಿಲ್ಲವೆಂದು ನಾವೆಲ್ಲಾ ಭಾವಿಸಿದ್ದೆವು. ಸನ್ಮಾನ್ಯ ಮಾಜಿ ಮುಖ್ಯ ಮಂತ್ರಿಗಳು ಹಾಲಿ ಪ್ರಧಾನಿಯವರದ್ದು ಬಹಳಷ್ಟು ವರ್ಷಗಳಿಂದ ಬಹಳ ಸ್ಪಷ್ಟವಾದ ಒಂದು ನಿಲುವು ಇತ್ತು. ಯಾವ ಕಾರಣಕ್ಕೂ ಸಹ ನಾವು ಟ್ರಿಬ್ಯುನಲ್ ಮುಂದೆ ಹೋಗಬಾರದು, ಟ್ರಿಬ್ಯುನಲ್‌ನ್ನು ಬಾಯ್‌ಕಾಟ್ ಮಾಡಬೇಕು ಅವರು ಎಂ.ಪಿ.ಗಳಾಗಿದ್ದಾಗಲೂ ಅದೇ ನಿಲುವು, ಮತ್ತು ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ನಮ್ಮ ಜೊತೆಯಲ್ಲಿ ಅದೇ ರೀತಿ ಮಾತುಕತೆಯಾಡಿ ಟ್ರಿಬ್ಯುನಲ್ ಮುಂದೆ ಹೋಗುವುದಿಲ್ಲ ಎನ್ನುವ ಭರವಸೆಯನ್ನು ಸರ್ವಾನುಮತದಿಂದ ನಿರ್ಣಯ ಮಾಡಿದ ಮೇಲೆ, ಇವತ್ತು ಕೇವಲ ತಮಿಳುನಾಡಿನ ಸರ್ಕಾರದ ಬೆಂಬಲ ಇದೆ ಎನ್ನುವಂಥ ಒಂದೇ ಒಂದು ಕಾರಣಕ್ಕೋಸ್ಕರ ಆ ಕುರ್ಚಿಯ ಉಳಿವಿಗಾಗಿ ಈ ರೀತಿ ಕರ್ನಾಟಕ ರಾಜ್ಯದ ಜನರ ಹಿತವನ್ನು ಬಲಿ ಕೊಟ್ಟು 5 ಟಿ.ಎಂ.ಸಿ. ನೀರನ್ನು ಬಿಡಿ ಎನ್ನುವಂಥ ಒತ್ತಾಯವನ್ನು ತರುವಂಥದ್ದು ಏನಾದರೂ ಆಗಿದ್ದರೆ, ಬಹುಶಃ ಇದಕ್ಕಿಂತ ಅಕ್ಷಮ್ಯ ಅಪರಾಧ ಬೇರೆ ಆಗಲಿಕ್ಕಿಲ್ಲ. ಬಹುಶಃ ಇನ್ನು ಮುಂದೆ ಬರುವಂಥ ದಿವಸಗಳಲ್ಲಿ ರಾಜ್ಯದ ಹಿತಕ್ಕೆ ದೊಡ್ಡ ಕೊಡಲಿ ಪೆಟ್ಟು ಬೀಳುತ್ತದೆ ಎನ್ನುವ ಭಯ ನಮ್ಮನ್ನು ಕಾಡುತ್ತಾ ಇದೆ. ಪ್ರಧಾನ ಮಂತ್ರಿಯವರು ಅವರ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕೆ ಈ ರೀತಿಯ ಆದೇಶ ಕೊಡುವಂಥದ್ದು, ಮುಖ್ಯ ಮಂತ್ರಿ ಅವರ ಒಂದು ಆದೇಶಕ್ಕೆ ತಕ್ಕಂತೆ ಇಲ್ಲಿ ಕುಣಿದು ರಾಜ್ಯದ ಹಿತವನ್ನು ಬಲಿ ಕೊಡುವಂಥಾದ್ದು ಇದು ಅಕ್ಷಮ್ಯ ಅಪರಾಧ. ಯಾವ ಕಾರಣಕ್ಕೂ ಇದನ್ನು ನಾವು ಸಹಿಸಲಿಕ್ಕೆ ಸಾಧ್ಯವಿಲ್ಲ. ಹಾಗಾದರೆ ಇವತ್ತು ನಾವು ನೀರನ್ನು ಬಿಡಲೇಬಾರದೇ? ನಾವು ಪಕ್ಕದ ರಾಜ್ಯಗಳಿಗೆ ಯಾವ ಕಾರಣಕ್ಕೂ ನೀರನ್ನು ಬಿಡಲೇಬಾರದು ಎಂದು ನಾನು ಹೇಳಲಿಲ್ಲ. ಏಕೆಂದರೆ ಅವತ್ತಿನಿಂದ ಇವತ್ತಿನವರೆವಿಗೂ ನಮ್ಮ ಜಲಾಶಯಗಳಲ್ಲಿ ನೀರು ಇರಲಿ ಇಲ್ಲದಿರಲಿ ನಾವು ಇಲ್ಲಿಯವರೆವಿಗೆ ನೀರನ್ನು ಬಿಟ್ಟುಕೊಂಡು

ಬರುತ್ತಾ ಇದ್ದೇವೆ. 6-7-1996ರಂದು ಸರ್ಕಾರವೇ ಕೊಟ್ಟಿರುವ ಪ್ರಕಾರ ವಿವಿಧ ಜಲಾಶಯಗಳಲ್ಲಿ ನೀರಿನ ಮಟ್ಟ ಈ ರೀತಿ ಇದೆ. ಕೆ.ಆರ್.ಎಸ್.ನಲ್ಲಿ 124.8 ಅಡಿ ಇರಬೇಕಾದಲ್ಲಿ 6-7-1996ರಂದು ನಮ್ಮಲ್ಲಿ ಇರುವಂಥ ನೀರು 92.12 ಅಡಿ ಮಾತ್ರ. ಕೊರತೆ ಸುಮಾರು 32.68 ಅಡಿ ಇದೆ. ಹೇಮಾವತಿಯಲ್ಲಿ 2922 ಅಡಿಯಲ್ಲಿ 2882.94 ಅಡಿ ನೀರು ಇದೆ. ಇದರಲ್ಲಿ ಕೊರತೆ 39.06 ಅಡಿ ಇದೆ. ಹಾರಂಗಿಯಲ್ಲಿ 2969 ಅಡಿಯಲ್ಲಿ 2836.98 ಅಡಿ ನೀರು ಇದೆ. ಕೊರತೆ 132.02 ಅಡಿ ಇದೆ. ಕಬಿನಿಯಲ್ಲಿ 2284 ಅಡಿಗೆ 2275.79 ಅಡಿ ನೀರು ಇದೆ. ಕೊರತೆ 8.21 ಅಡಿ ಇದೆ. ನಂತರ ತಮಿಳುನಾಡಿಗೆ ಕರ್ನಾಟಕ ಸರ್ಕಾರ 1991-92ರಿಂದ ಇವತ್ತಿನವರೆಗೂ ಜಲಾಶಯದಲ್ಲಿ ನೀರು ಇದ್ದಾಗ ಅವರ ನಿರೀಕ್ಷೆ ಮೀರಿ ನಾವು ನೀರನ್ನು ಬಿಟ್ಟುಕೊಂಡು ಬರುತ್ತಾ ಇದ್ದೇವೆ. 1996ರ ಜೂನ್ ವರೆಗೆ 5.63 ಟಿ.ಎಂ.ಸಿ. ಹಾಗೂ ಜುಲೈ 3ರ ವರೆಗೆ 0.387 ಟಿ.ಎಂ.ಸಿ. ನೀರನ್ನು ನಾವು ಬಿಟ್ಟಿದ್ದೇವೆ. ಇಲ್ಲಿ ಮುಖ್ಯವಾಗಿ ಇರುವಂಥ ವಿಷಯ ಏನೆಂದರೆ, ಇವತ್ತು ಕರ್ನಾಟಕದಲ್ಲಿ 7-7-1996ರ ವರಗೆ ಅವಶ್ಯಕತೆವರೆಗೆ ಇರುವಂಥ ನೀರಿನ ಪ್ರಮಾಣ: ಕೆ.ಆರ್.ಎಸ್. 7.725 ಟಿ.ಎಂ.ಸಿ., ಕಬಿನಿಯಲ್ಲಿ 7.296, ಹಾರಂಗಿಯಲ್ಲಿ 1.927 ಟಿ.ಎಂ.ಸಿ., ಹೇಮಾವತಿಯಲ್ಲಿ 7.400 ಟಿ.ಎಂ.ಸಿ., ಒಟ್ಟು 24.348 ಎಂ.ಡಿ.ಡಿ.ಎಲ್.ಮಿನಿಮಮ್ ಲೆವೆಲ್ ಇದೆ. ಈಗ ಕರ್ನಾಟಕಕ್ಕೆ ಆಗತ್ಯ ಇರುವಂಥದ್ದು, ಕರ್ನಾಟಕದಲ್ಲಿ ಲಭ್ಯ ಇರುವಂಥ ನೀರಿನ ಪ್ರಮಾಣ 7-7-1996ಕ್ಕೆ ಕೆ.ಆರ್.ಎಸ್.ನಲ್ಲಿ 8.816 ಟಿ.ಎಂ.ಸಿ. . . . . .

ಅಧ್ಯಕ್ಷರು:- ಯಡಿಯೂರಪ್ಪನವರೆ ನಾನು ಏನು ಹೇಳುತ್ತೇನೆಂದರೆ ವಿವರಣೆಗೆ ನೀವು ಹೋಗಬಾರದು. My sincere request is. . . . ಈಗ ಸಭಾ ನಾಯಕರು ಬಂದಿದ್ದಾರೆ. ತಾವು ಎಲ್ಲರೂ ಇದ್ದೀರಿ. Before the Question Hour you wanted to raise. ತಾವು ಈ ವಿಚಾರ ಪ್ರಸ್ತಾಪ ಮಾಡಬೇಕು ಎನ್ನುವುದಕ್ಕೆ ಕಾತುರರಾಗಿದ್ದೀರಿ ಎಂದು ಹೇಳಿದರೆ ತಾವೆಲ್ಲರೂ ಎರಡೆರಡು ನಿಮಿಷ ಮಾತನಾಡಿ ಮುಗಿಸಿದರೆ I will ask the Hon'ble Leader to the House to give his views and then let's take a decision, should we give up the Question Hour or should I go ahead with the Question Hour, let's sort out this.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ವಿವರಣೆಗೆ ನಾನು ಹೋಗುವುದಿಲ್ಲ. ನಾನು ಇಷ್ಟೆ ಹೇಳುವಂಥದ್ದು. ನಾನು ಈ ರಾಜ್ಯದ ಮುಖ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಮನೆ ಬಗ್ಗೆ ನಿಮಗೆ ವಿಶ್ವಾಸ ಇಲ್ಲವೇ? ಚುನಾಯಿತ ಪ್ರತಿನಿಧಿಗಳ ಬಗ್ಗೆ ತಮಗೆ ವಿಶ್ವಾಸ ಇಲ್ಲವೇ? ನಿನ್ನೆ ಮೊನ್ನೆ ಇಲ್ಲಿ ಕಾರ್ಯಕಲಾಪ ಯಾವ ರೀತಿ ನಡೆಯಿತು? ವಿದ್ಯುತ್ ದರ ಏರಿಕೆ ಸಂದರ್ಭಗಳಲ್ಲಿ ನಾವು ಧರಣಿ ಕುಳಿತರೂ ಸಹ ನಿಮ್ಮ ಜೊತೆ ನಾವು ಮಾತುಕತೆಗೆ ಮುಂದಾದೆವು. ನೀವು ಹಿಂದೆ ನಡೆದಂಥ ಈ ಮನೆಯ ತೀರ್ಮಾನದ ವಿರುದ್ಧ ಮತ್ತು ಎಲ್ಲಾ ಪಕ್ಷಗಳ, ಪ್ರತಿಪಕ್ಷದ ಒಂದು ಸಭೆಯನ್ನು ಕರೆದು ಪ್ರಧಾನ ಮಂತ್ರಿಯವರು ಮಧ್ಯೆ ಪ್ರವೇಶ ಮಾಡಿ 5 ಟಿ.ಎಂ.ಸಿ.ನೀರನ್ನು ಎಕ್ಸ್‌ಪರ್ಟ್ ಕಮಿಟಿಯವರು ಬಿಡಬೇಕೆಂದು ಹೇಳಿದ ಕಾಲದಲ್ಲಿ ನಾವು ಯಾವ ರೀತಿ ನಡೆದುಕೊಂಡೆವು? ಆದರೆ ಈಗ ನೀವು ಯಾವ ರೀತಿ ನಡೆದುಕೊಂಡಿದ್ದೀರಿ? ನಮ್ಮ ಜಲಾಶಯದಲ್ಲಿ ನೀರು ಇಲ್ಲದೇ ಇದ್ದಾಗ

ನೀರು ಬಿಡುವ ಪ್ರಶ್ನೆ ಎಲ್ಲಿ ಬರುತ್ತದೆ? ಎಂದು ತಾವೇ ಮುಖ್ಯ ಮಂತ್ರಿಗಳಾಗಿ ಹೇಳಿದ್ದೀರಿ. ನಿನ್ನೆ ಟಿ.ವಿ.ಸಂದರ್ಶನದಲ್ಲಿ ಇಡೀ ರಾಜ್ಯದ ಜನ ನೋಡಿದ್ದಾರೆ. ಬೆಳಿಗ್ಗೆ ವಿರೋಧ ಪಕ್ಷದ ನಾಯಕರ ಸಭೆಯನ್ನು ಕರೆದಾಗ ಜಲಾಶಯದ ನೀರಿನ ಮಟ್ಟ ನಿಮಗೆ ಗೊತ್ತಿತ್ತು. ಆಗಲೇ ಸುಪ್ರೀಂ ಕೋರ್ಟಿಗೆ ತಮಿಳುನಾಡಿನವರು ಹೋಗುತ್ತಾ ಇದ್ದಾರೆಂದು ನಿಮಗೆ ಮನವರಿಕೆ ಆಗಿತ್ತು. ಅದನ್ನು ತಾವು ಸ್ಪಷ್ಟ ಮಾಡಿದಿರಿ, ಕಾನೂನು ಸಚಿವರು ಸ್ಪಷ್ಟ ಮಾಡಿದರು. ನಿನ್ನೆ ಗೊತ್ತಿದ್ದರೂ ಸಹ ವಿರೋಧ ಪಕ್ಷವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನೀರು ಬಿಡುವ ಪ್ರಶ್ನೆ ಇಲ್ಲ ಎಂದು ಅಲ್ಲಿ ಹೇಳಿ ಸಾಯಂಕಾಲದೊಳಗೆ ನಿಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ಬೆಳಿಗ್ಗೆ 10 ಗಂಟೆಯಿಂದ ಹೇಮಾವತಿಯಿಂದ 3500 ಕ್ಯೂಸೆಕ್ಸ್ ನೀರನ್ನು ಬಿಡುವಂಥ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದಾದರೆ ಬಹುಶಃ ಈ ಮನೆಗೆ, ಚುನಾಯಿತ ಪ್ರತಿನಿಧಿಗಳಿಗೆ ವಿರೋಧ ಪಕ್ಷಗಳಿಗೆ ಅವರ ಗೌರವಕ್ಕೆ ಧಕ್ಕೆ ಬರುವಂಥ ಕೆಲಸವಾಗಿದೆ. ಆದ್ದರಿಂದ ನಿಮ್ಮ ಕುರ್ಚಿ, ಪ್ರಧಾನಿ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೆ ಈ ರೀತಿ ಜನತೆಗೆ ದ್ರೋಹ ಮಾಡುವುದಕ್ಕೆ ನಾವು ಬಿಡುವುದಿಲ್ಲ. ಅದು ಯಾವ ಒಂದು ವಿಶೇಷವಾದಂತಹ ಸಂದರ್ಭ? ಏಕಾಏಕಿ 5 ಟಿ.ಎಂ.ಸಿ. ನೀರನ್ನು ತಮಿಳು ನಾಡಿಗೆ ಬಿಡುವುದಕ್ಕೆ ತಾವು ಆದೇಶವನ್ನು ನೀಡಿದ್ದೀರಿ ಅದರ ಸ್ಪಷ್ಟತೆಯನ್ನು ನೀಡಿದ ಮೇಲೆ ಉಳಿದ ವಿವರಗಳನ್ನು ಕೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

★ **ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ಗುರುಮಿಟ್ಕಲ್):-** ಮಾನ್ಯ ಅಧ್ಯಕ್ಷರೆ, ತಮಿಳುನಾಡಿಗೆ 5 ಟಿ.ಎಂ.ಸಿ. ನೀರನ್ನು ಬಿಟ್ಟಿರುವುದು ಬಹಳ ಸೀರಿಯಸ್ ಮ್ಯಾಟರ್. ಬಹುಶಃ ಸರ್ಕಾರದ ದೃಷ್ಟಿಯಿಂದ ಈ ವಿಷಯ ಅಷ್ಟು ಸೀರಿಯಸ್ ಇಲ್ಲದೇ ಇರಬಹುದು. ಆದರೆ ರಾಜ್ಯದ ರೈತರ ಹಿತದೃಷ್ಟಿಯಿಂದ ಮತ್ತು ರಾಜ್ಯದ ದೃಷ್ಟಿಯಿಂದ ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ ಎನ್ನತಕ್ಕಂಥಾದ್ದನ್ನು ನಾವು ಯಾರು ಕೂಡ ಅಲ್ಲಗೆಳೆಯುವಾಗಿಲ್ಲ. 5 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಡಬೇಕೆಂಬ ಪ್ರಸ್ತಾವನೆಯು ಸರ್ಕಾರದ ಮುಂದೆ ನಿನ್ನೆಯ ಸಾಯಂಕಾಲ 3 1/2, 4 ಗಂಟೆಯವರೆಗೆ ಇರಲಿಲ್ಲ. 4 ಗಂಟೆಯ ನಂತರ ಈ ಬೆಳವಣಿಗೆ ಆಗಿದೆ ಇದು ಏಕೆ ಆಯಿತು? ಯಾರ ಹೇಳಿಕೆಯ ಮೇಲೆ ಆಯಿತು ಇದು ಒಂದು. ಎರಡನೆಯದಾಗಿ ನಮ್ಮ ಜಲಾಶಯದಲ್ಲಿ ಕೇವಲ 14- 15 ಟಿ.ಎಂ.ಸಿ. ನೀರು ಮಾತ್ರ ಇದೆ ಎಂದು ಹೇಳಿ ಬರವಣಿಗೆಯ ಮೂಲಕ ಪೇಪರ್‌ನಲ್ಲಿ ನೋಡಿದ್ದೇವೆ, ಓದಿದ್ದೇವೆ. ಮತ್ತು ಅನೇಕ ತಜ್ಞರು ಕೂಡ ಇದನ್ನು ಹೇಳಿದ್ದಾರೆ. ಆದರೆ ಸರ್ಕಾರ ಅದಕ್ಕೆ ತದ್ವಿರುದ್ಧವಾಗಿ 15 ಟಿ.ಎಂ.ಸಿ. ಇಲ್ಲ ನಮ್ಮ ಜಲಾಶಯದಲ್ಲಿ 20, 30 ಟಿ.ಎಂ.ಸಿ. ನೀರು ಇದೆ ಎಂದು ಹೇಳಿಕೊಳ್ಳುತ್ತಾರೆ. ತಮ್ಮೆಲ್ಲರಿಗೂ ಕೂಡ ಗೊತ್ತಿದೆ. ಇತ್ತೀಚಿನ ದಿವಸಗಳಲ್ಲಿ ಹೆಚ್ಚಿನ ಮಳೆಯು ಬಂದಿಲ್ಲ. ಯಾವ ಜಲಾಶಯದಲ್ಲಿಯೂ ಕೂಡ 10 ಪರ್ಸೆಂಟ್‌ಗಿಂತಲೂ ಹೆಚ್ಚಿನ ನೀರು ಇಲ್ಲವೆಂದು ಹೇಳಿ, ಇವತ್ತು ಅನೇಕ ಹೇಳಿಕೆಗಳು ಸರ್ಕಾರದಿಂದ ಬಂದಿವೆ. ಆದರೂ, ಪವರ್ ಕಾರ್ಪೊರೇಷನ್‌ನವರು ಕೂಡ ತಮ್ಮ ವಿದ್ಯುಚ್ಛಕ್ತಿಯನ್ನು ವಿತರಣೆ ಮಾಡುವಾಗ ಪವರ್‌ನ್ನು ಕಟ್ ಮಾಡಬೇಕಾಗುತ್ತದೆ. ಏಕೆಂದರೆ ಮಳೆಯು ಹೆಚ್ಚು ಬಂದಿಲ್ಲ ಬಹಳ ಗಂಭೀರವಾದಂತಹ ಪರಿಸ್ಥಿತಿ ಇದೆ ಎಂದು ಹೇಳಿಕೆಯನ್ನು ಕೊಟ್ಟಿದ್ದರೂ ಕೂಡ ಅಥೆಂಟಿಕ್ ಆಗಿ ಸರ್ಕಾರದ ವತಿಯಿಂದ ಬಂದಿರುವಂತಹ ಹೇಳಿಕೆಗಳು ಕೂಡ ಇವೆ. ಇವೆಲ್ಲ ಇದ್ದಾಗ್ಯೂ ಕೂಡ ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಭೆಯನ್ನು ಕರೆದರು, ಸಭೆಯನ್ನು ಯಾವುದಕ್ಕಾಗಿ ಕರೆಸಿದರು ಎಂದರೆ, 12ನೇ ತಾರೀಖು ಟ್ರಿಬ್ಯುನಲ್ ಮುಂದೆ ಈ ಒಂದು ಕಾವೇರಿಯ ವಿವಾದ ಇತ್ತು. ಆ

ವಿವಾದದಲ್ಲಿ ಯಾವ ರೀತಿಯಾಗಿ ನಾವು ಮುಂದೆ ಸಾಗಬೇಕೆಂದು ಕೇಳುವುದಕ್ಕಾಗಿ ಬಹುಶಃ ಕರೆದಿದ್ದರು ಎಂದು ಕಾಣುತ್ತದೆ. ಆದರೆ ಟ್ರಿಬ್ಯುನಲ್ ಅಧ್ಯಕ್ಷರಾದ ಘೋಷ್‌ರವರು ತಮ್ಮ ಸ್ಥಾನಕ್ಕೆ ರಾಜಿನಾಮೆಯನ್ನು ಕೊಟ್ಟ ಮೇಲೆ ಬಹುಶಃ ಆ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಮುಂದೂಡಿ ನಾನೇ ಮಾತನಾಡಿ ಮುಂದೆ ಯಾವ ರೀತಿಯಾಗಿ ತೆಗೆದುಕೊಂಡು ಹೋಗಬೇಕು ಎಂದು ವಿಚಾರ ಮಾಡುತ್ತೇನೆ ಎಂದು ಹೇಳಿದ ಮೇಲೆ ಅಲ್ಲಿಗೆ ಯಾವುದೇ ನಿರ್ಣಯವು ಇಲ್ಲದೇ ಮುಕ್ತಾಯವಾಯಿತು. ಆದರೆ ಆ ಸಂದರ್ಭದಲ್ಲಿಯೂ ಕೂಡ ನಾನು 5 ಟಿ.ಎಂ.ಸಿ. ನೀರನ್ನು ಬಿಡಬೇಕಾಗುತ್ತದೆಂದು ಹೇಳಿಲ್ಲ. ಅವರು 15 ಟಿ.ಎಂ.ಸಿ. ನೀರನ್ನು ಕೇಳುತ್ತಿದ್ದಾರೆ. ಅದಕ್ಕೆ ತಮಿಳು ನಾಡಿನ ರೈತರ ತೊಂದರೆಯನ್ನು ನಿವಾರಣೆಯನ್ನು ಮಾಡಬೇಕಾಗಿರುವುದರಿಂದ 5 ಟಿ.ಎಂ.ಸಿ. ನೀರನ್ನು ಬಿಡಬೇಕಾಗುತ್ತದೆ, ನಮ್ಮ ರೈತರ ಗೋಳು ಏನೇ ಇರಲಿ ಅದನ್ನು ಬದಿಗಿಟ್ಟು ದೇಶದಲ್ಲಿ ಇವತ್ತು ನಮ್ಮ ಕರ್ನಾಟಕ ರಾಜ್ಯದವರೊಬ್ಬರು ಪ್ರಧಾನ ಮಂತ್ರಿಗಳಾಗಿದ್ದಾರೆ ಅವರ ಒಂದು ಹಿತದೃಷ್ಟಿಯಿಂದ ರಾಜ್ಯದ ಹಿತವನ್ನು ಬಲಿ ಕೊಡೋಣ ಎನ್ನುವ ದೃಷ್ಟಿಯಿಂದ ಬಹುಶಃ ಈ ನಿರ್ಧಾರವನ್ನು ತೆಗೆದುಕೊಂಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಇಲ್ಲ ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳುತ್ತಿದ್ದರು. ಯಾವುದಕ್ಕೂ ಮಾನ್ಯ ಮುಖ್ಯ ಮಂತ್ರಿಗಳು ಹಿಂಜರಿಯುವುದಿಲ್ಲ. ಅನೇಕ ಸಾರಿ ನಾವು ಯಾವುದೇ ಪ್ರಶ್ನೆಯನ್ನು ಕೇಳಿದಾಗ ಅವರ ಸ್ಪಷ್ಟತೆಗೆ ಅವರು ಬದ್ಧರಾಗಿದ್ದರು. ಆದರೆ ಈ ವಿಷಯವನ್ನು ಏಕೆ ಬಚ್ಚಿಟ್ಟರು? ಏಕೆ ಈ ಮಾತನ್ನು ಆ ಸಭೆಯಲ್ಲಿ ಹೇಳಲಿಲ್ಲ? ಇದನ್ನು ಯೋಚನೆ ಮಾಡಿದಾಗ ನನ್ನ ಗಮನಕ್ಕೆ ಬಂದಿದ್ದು ಮತ್ತು ಪೇಪರ್‌ನಲ್ಲಿ ಬಂದಿರತಕ್ಕಂತಹ ರಿಪೋರ್ಟನ್ನು ಓದಿದ ಪ್ರಕಾರವಾಗಿ ಏನಿದೆ ಎಂದರೆ, ಶ್ರೀಮಾನ್ ಬೊಮ್ಮಾಯಿಯವರು ಮದ್ರಾಸ್‌ಗೆ ಹೋಗಿ ಅಲ್ಲಿ ಕರುಣಾನಿಧಿಯವರನ್ನು ಭೇಟಿಯಾಗಿ ಅವರನ್ನು ಸಮಜಾಯಿಸಿ ಆಮೇಲೆ ನಾವು ಕರ್ನಾಟಕದಿಂದ ನೀರನ್ನು ಬಿಡುತ್ತೇವೆಂದು ಹೇಳಿ ಬಹುಶಃ ಅವರು ಅದಕ್ಕೆ ಒಪ್ಪಿಗೆ ಕೊಟ್ಟ ಮೇಲೆ ಪ್ರಧಾನ ಮಂತ್ರಿಗಳು ಮತ್ತು ಬೊಮ್ಮಾಯಿಯವರುಗಳ ನಡುವೆ ಚರ್ಚೆಯಾದ ಮೇಲೆ ಆ ಚರ್ಚೆಯ ಫಲಿತಾಂಶವಾಗಿ ಪುನಃ ಮುಖ್ಯ ಮಂತ್ರಿಗಳಿಗೆ ಒತ್ತಡವನ್ನು ತಂದು ದೂರವಾಣಿಯ ಮೂಲಕ ಸಂಪರ್ಕ ಮಾಡಿ, ನೀರನ್ನು ಬಿಡದಿದ್ದರೆ ನಿಮ್ಮ ಪರಿಸ್ಥಿತಿಯೂ ಕೂಡ ಬಹಳ ಕಷ್ಟವಾಗುತ್ತದೆ ಎನ್ನತಕ್ಕಂತಹ ಮಾತನ್ನು ಹೇಳಿದ ಮೇಲೆ ಬಹುಶಃ ಮಾನ್ಯ ಮುಖ್ಯ ಮಂತ್ರಿಗಳು ಮಣಿದಿರಬಹುದು ಎನ್ನತಕ್ಕಂತಹ ಸಂಶಯ ನನಗೆ ಬರುತ್ತದೆ. ಏಕೆಂದರೆ ಇವತ್ತು 10 ಗಂಟೆಯಿಂದ ನೀರನ್ನು ತಮಿಳುನಾಡಿಗೆ ಬಿಡುತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ, ಸಂಕಷ್ಟ ಪರಿಹಾರ ಸೂತ್ರವೇ ಅಂದರೆ ಡಿಸ್ಟ್ರೆಸ್ ಫಾರ್ಮೂಲವೇ ಸರಿಯಿಲ್ಲವೆಂದು ಈ ಸದನದಲ್ಲಿ ವಾದವನ್ನು ಮಾಡಿ, ನಮ್ಮ ಜಲಾಶಯಗಳಲ್ಲಿ ನೀರೇ ಇಲ್ಲದಿದ್ದಂತಹ ಸಂದರ್ಭದಲ್ಲಿ ತಮಿಳುನಾಡಿಗೆ 205 ಟಿ.ಎಂ.ಸಿ. ನೀರನ್ನು ಹೇಗೆ ಮಾಡಬೇಕು, ಯಾವ ರೀತಿಯಲ್ಲಿ ಬಿಡಬೇಕೆಂದು ನಾವು ಹಠವನ್ನು ಹಿಡಿದುಕೊಂಡು ಕೊನೆಗೆ ಅಲೊಟ್ ಕಮಿಟಿಯನ್ನು ಕಳುಹಿಸಿ, ಇಲ್ಲಿರತಕ್ಕಂತಹ ಪರಿಸ್ಥಿತಿಯನ್ನು ನೋಡಿ, ಕರ್ನಾಟಕದ ರೈತರ ಗೋಳಾಟವನ್ನು ನೋಡಿದ ನಂತರ ತಮಿಳುನಾಡಿನ ರೈತರ ಗೋಳು ಏನಿದೆ ಎಂದು ತಿಳಿದುಕೊಂಡು ಅದರ ಆಧಾರದ ಮೇಲೆ ನೀರು ಬಿಡಬೇಕೆಂದು ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮಾನ್ ನರಸಿಂಹರಾವ್‌ರವರು ಹೇಳಿದರು, ಅದೂ ಸುಪ್ರೀಂ ಕೋರ್ಟ್‌ನ ಆದೇಶದ ಮೇರೆಗೆ. ಅಂದರೆ ಹಿಂದೆ ಬಿಟ್ಟಂತಹ ನೀರಿಗೆ ಅಷ್ಟೊಂದು ಕಾಲ ಹಿಡಿಯಿತು ಮತ್ತು ವಿಚಾರ ವಿನಿಮಯ ಮಾಡಿದರು. ಆದರೆ

ತಮಿಳುನಾಡಿನವರು ನೀರು ಬಿಡಬೇಕೆಂದು ಸುಪ್ರೀಂ ಕೋರ್ಟ್‌ಗೆ ಹೋದರು, ಸುಪ್ರೀಂ ಕೋರ್ಟ್‌ನವರು ಪ್ರಧಾನ ಮಂತ್ರಿಗಳಿಗೆ ಡೈರಕ್ಷನ್ ಕೊಟ್ಟರು. ಕೊಟ್ಟ ಮೇಲೆ ಪ್ರಧಾನ ಮಂತ್ರಿಗಳು ಟೈಮನ್ನು ತೆಗೆದುಕೊಂಡರು, ಪ್ರಧಾನ ಮಂತ್ರಿಗಳು ಕರ್ನಾಟಕದ ಮುಖ್ಯ ಮಂತ್ರಿಗಳನ್ನು ಮತ್ತು ತಮಿಳುನಾಡಿನ ಮುಖ್ಯ ಮಂತ್ರಿಗಳನ್ನು ಮತ್ತು ಎಲ್ಲಾರನ್ನು ಕರೆಯಿಸಿ ಮಾತನಾಡಿದರು, ಎಂ.ಪಿ.ಗಳನ್ನು ಮತ್ತು ವಿರೋಧ ಪಕ್ಷದವರನ್ನು ಸಹ ಕರೆಯಿಸಿ ಮಾತನಾಡಿದರು, ಇದೆಲ್ಲಾ ಆದಮೇಲೆ ಒಂದು ನಿರ್ಣಯಕ್ಕೆ ಬಂದು, ಕರ್ನಾಟಕದಿಂದ ತಮಿಳುನಾಡಿಗೆ 6 ಟಿ.ಎಂ.ಸಿ. ನೀರನ್ನು ಅದರಲ್ಲಿಯೂ ಇಲ್ಲಿರತಕ್ಕಂತಹ ಇತಿಮಿತಿಯನ್ನು ನೋಡಿಕೊಂಡು ಕ್ವಾಂಟಿಟಿ ನೋಡಿಕೊಂಡು ಬಿಡಬೇಕು ಎಂದು ಒಂದು ನಿರ್ಣಯಕ್ಕೆ ಬಂದರು. ಹೀಗಿರುವಾಗ ಈ ಸರ್ಕಾರ ತರಾತುರಿಯಲ್ಲಿ ಇವತ್ತು 10 ಗಂಟೆಗೆ ಕರ್ನಾಟಕದಿಂದ ತಮಿಳುನಾಡಿಗೆ ನೀರನ್ನು ಬಿಡುವಂತಹ ಅವಶ್ಯಕತೆ ಏನಿತ್ತು? ಎರಡನೆಯದಾಗಿ ನಮ್ಮ ಕರ್ನಾಟಕದ ಜಲಾಶಯಗಳಲ್ಲಿ ನೀರು ಇಲ್ಲ, ಅದರಲ್ಲಿಯೂ ನಮ್ಮ ರೈತರ ಗೋಳಾಡುತ್ತಿದ್ದಾರೆ, ನಮ್ಮ ರೈತರಿಗೆ ನಮ್ಮ ಜಲಾಶಯದಲ್ಲಿರತಕ್ಕಂತಹ ನೀರು ಸಾಕಾಗುವುದಿಲ್ಲವೆಂದು ನೀವೇ ಒಪ್ಪಿಕೊಂಡಿರುತ್ತೀರಿ. ಮಾನ್ಯ ಮಂತ್ರಿಗಳು ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಈ ರೀತಿಯಾಗಿ ಒಪ್ಪಿಕೊಂಡು ಕಾವೇರಿ ಜಲಾನಯದ ಪ್ರದೇಶದಲ್ಲಿರತಕ್ಕಂತಹ ರೈತರು ಮಾಡತಕ್ಕಂತಹ ಬಿತ್ತನೆಯನ್ನು ಬದಿಗಿಟ್ಟು, ಕರ್ನಾಟಕದ ರೈತರ ಬೆಳೆಯನ್ನು ನಾಶ ಮಾಡಿ, ತಮಿಳುನಾಡಿನ ರೈತರಿಗೆ ಸಹಾಯ ಮಾಡುತ್ತೇವೆಂದು ಹೊರಟರೆ ಅದು ಎಷ್ಟರ ಮಟ್ಟಿಗೆ ಈ ರಾಜ್ಯದ ಹಿತದೃಷ್ಟಿಯಿಂದ ಈ ರಾಜ್ಯದ ರೈತರ ಹಿತದೃಷ್ಟಿಯಿಂದ ತಾವು ಕೆಲಸ ಮಾಡುತ್ತಿದ್ದೀರಿ ಎನ್ನತಕ್ಕಂತಹ ಮಾತನ್ನು ನಾನು ಇವತ್ತು ಕೇಳುತ್ತಿದ್ದೇನೆ. ಮತ್ತು ಇನ್ನೊಂದು ವಿಶೇಷವಾಗಿ ಏನೆಂದರೆ, ಇನ್ನೂ ಇದಕ್ಕೆ ಟೈಮ್ ಮಿಂಚಿಲ್ಲ. ತಾವು ತರಾತುರಿಯಲ್ಲಿ ಈ ನಿರ್ಧಾರವನ್ನು ತೆಗೆದುಕೊಂಡಿರಬಹುದು. ಈಗಲಾದರೂ ತಾವು ಏನು 3500 ಕ್ಯೂಸೆಕ್ಸ್ ನೀರನ್ನು ಬಿಡುಗಡೆ ಮಾಡಿದ್ದೀರಿ ಅದನ್ನು ತಕ್ಷಣ ನಿಲ್ಲಿಸಿ. ಮಾನ್ಯ ಮುಖ್ಯ ಮಂತ್ರಿಗಳು ನೀರನ್ನು ನಿಲ್ಲಿಸಬೇಕೆಂದು ಒಂದು ದೂರವಾಣಿಯ ಕರೆಯನ್ನು ಮಾಡಿದರೆ ನಿಮ್ಮ ಚೀಫ್ ಇಂಜಿನಿಯರ್ ನೀರನ್ನು ನಿಲ್ಲಿಸುತ್ತಾರೆ. ಅದಕ್ಕೆ ಏನು ಹೆಚ್ಚು ಸಮಯ ಬೇಕಾಗಿರುವುದಿಲ್ಲ. ಆದುದರಿಂದ ನಾನು ತಮ್ಮ ಮೂಲಕ ಕೇಳುವುದೇನೆಂದರೆ, ಈ ಅನಾಹುತ ಏನಾಗುತ್ತಿದೆ, ನಮ್ಮ ರೈತರಿಗೆ ಏನು ತೊಂದರೆಯಾಗುತ್ತಿದೆ ಅದು ನಿವಾರಣೆಯಾಗಬೇಕಾದರೆ ತಕ್ಷಣ ತಮಿಳುನಾಡಿಗೆ ನೀರು ಬಿಡುತ್ತಿರುವುದನ್ನು ದಯವಿಟ್ಟು ನಿಲ್ಲಿಸಿ. ಮತ್ತು ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ. ಮತ್ತೆ ತಾವು ಸಭೆಯನ್ನು ಕರೆಯಿರಿ, ನಾವುಗಳೆಲ್ಲರೂ ಕುಳಿತುಕೊಂಡು ಇದರ ಬಗ್ಗೆ ಮಾತನಾಡೋಣ. ಯಾವ ರೀತಿಯಾಗಿ ತಮಿಳುನಾಡಿಗೆ ನೀರನ್ನು ಬಿಡಬಹುದು ಅಥವಾ ಯಾವ ರೀತಿಯಾಗಿ ನೀರನ್ನು ಬಿಡುವುದಕ್ಕೆ ಸಾಧ್ಯವಿಲ್ಲ. ನಮ್ಮ ರೈತರ ಹಿತವನ್ನು ನಾವು ಯಾವ ರೀತಿಯಾಗಿ ಕಾಪಾಡಬಹುದು ಎನ್ನತಕ್ಕಂಥದ್ದನ್ನು ಚರ್ಚೆ ಮಾಡಿ ತದನಂತರ ಈ ಕಾರ್ಯಕ್ರಮವನ್ನು ಹಾಕಿಕೊಳ್ಳೋಣ. ಇಲ್ಲದಿದ್ದರೆ ಪುನಃ ಈ ಕರ್ನಾಟಕ ರಾಜ್ಯದಲ್ಲಿ ದಂಗೆ ಏಳುತ್ತದೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸಬೇಕಾಗುತ್ತದೆ. ತಮಗೂ ಸಹ ಇದು ಗೊತ್ತಿದೆ. ತಮ್ಮ ಹಿತದೃಷ್ಟಿಯಿಂದ, ತಮ್ಮ ಸರ್ಕಾರದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಈ ಮಾತನ್ನು ಕೇಳುತ್ತಿದ್ದೇನೆ. ನೀವಾಗಿ ಕಲ್ಲನ್ನು ನಿಮ್ಮ ಕಾಲಿನ ಮೇಲೆ ಹಾಕಿಕೊಳ್ಳಬೇಡಿ. ಇದು ಈ ರಾಜ್ಯದ ಹಿತದೃಷ್ಟಿಯಿಂದ ಮುಖ್ಯವಾಗಿದೆ ಆದುದರಿಂದ ಇದನ್ನು ವಿಚಾರ ಮಾಡಿ. ನೀವು ಸಹ ಇದರ ಬಗ್ಗೆ

ಚಿಂತನೆಯನ್ನು ಮಾಡಬೇಕಾಗುತ್ತದೆ. ನಮ್ಮ ಕರ್ನಾಟಕದವರು ಒಬ್ಬರು ಪ್ರಧಾನ ಮಂತ್ರಿಗಳಾದರು ಎಂದು ಅವರ ಹಿತದೃಷ್ಟಿಯಿಂದ, ಅವರ ರಾಜಕಾರಣದ ದೃಷ್ಟಿಯಿಂದ, ಅವರ ಸ್ಥಾನಮಾನದ ದೃಷ್ಟಿಯಿಂದ ಮತ್ತು ಅವರ ಗೌರವವನ್ನು ಕಾಪಾಡಿಕೊಳ್ಳಬೇಕೆಂದು ಅವರು ಸಲಹೆಯನ್ನು ಕೊಟ್ಟ ಮೇರೆಗೆ ನೀವು ಮುಖ್ಯ ಮಂತ್ರಿಗಳು ವರ್ತಿಸಿದರೆ ಕರ್ನಾಟಕದ ಜನರಿಗೆ ನಾವು, ನೀವು ದ್ರೋಹ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ಈ ರೀತಿಯಾಗಿ ಮಾಡುವುದನ್ನು ತಪ್ಪಿಸುವುದಕ್ಕೆ ದಯವಿಟ್ಟು ತಮಿಳುನಾಡಿಗೆ ನೀರು ಬಿಡುತ್ತಿರುವುದನ್ನು ನಿಲ್ಲಿಸಿ. ಆದುದರಿಂದ ಮಾನ್ಯ ಅಧ್ಯಕ್ಷರೆ, ಈ ವಿಷಯವು ಬಹಳ ಗಂಭೀರವಾಗಿರುವುದರಿಂದ ಪ್ರಶ್ನೋತ್ತರ ವೇಳೆಯನ್ನು ತಾವು ತಡೆ ಹಿಡಿದು, ಕಾವೇರಿ ನೀರಿನ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಡಬೇಕು ಮತ್ತು ಈಗ ತಮಿಳುನಾಡಿಗೆ ಕರ್ನಾಟಕದಿಂದ ಹೋಗುತ್ತಿರುವ ನೀರನ್ನು ತಕ್ಷಣ ನಿಲ್ಲಿಸಬೇಕು. ಆಮೇಲೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ನಾನು ಕೇಳಿಕೊಳ್ಳುತ್ತೇನೆ.

★ **ಶ್ರೀ ಯು.ಆರ್.ಸಭಾಪತಿ(ಉಡುಪಿ):-** ಮಾನ್ಯ ಅಧ್ಯಕ್ಷರೆ, ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಸರ್ವ ಪಕ್ಷಗಳ ನಾಯಕರ ಸಭೆಯನ್ನು ಕರೆದಿದ್ದರು. ಅಲ್ಲಿ ಮಾನ್ಯ ಪ್ರಧಾನ ಮಂತ್ರಿಗಳ ಜೊತೆಯಲ್ಲಿ ನೇರವಾಗಿ ಸಂಪರ್ಕವನ್ನು ಬೆಳೆಸಿ ನಮ್ಮ ಕರ್ನಾಟಕ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಬೇಕೆಂಬ ತೀರ್ಮಾನವನ್ನು ನಾವೆಲ್ಲರೂ ಕೈಗೊಂಡೆವು. ಆದರೆ ನಿನ್ನೆ ಸಂಜೆ ಆಗುವಾಗಲೆ ನಮಗೆ ಏನು ಸುದ್ಧಿ ಬಂತು ಎಂದರೆ ಸರ್ಕಾರದ ನಿರ್ಧಾರದ ಪ್ರಕಾರ ತಮಿಳುನಾಡಿಗೆ 5 ಟಿ.ಎಂ.ಸಿ. ನೀರನ್ನು ಬಿಡಲಾಗುತ್ತದೆ ಎಂದು. ಇವತ್ತು ಎಲ್ಲ ಪತ್ರಿಕೆಗಳಲ್ಲೂ 5 ಟಿ.ಎಂ.ಸಿ. ನೀರನ್ನು ಬಿಡುವ ಬಗ್ಗೆ ಸರ್ಕಾರ ನಿರ್ಧರಿಸಿದೆ ಎಂದು ವರದಿಯಾಗಿರುವುದನ್ನು ನೋಡಿದೆವು. ನಿನ್ನೆ ಸರ್ವ ಪಕ್ಷಗಳ ನಾಯಕರ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟ ಮೇಲೆ ಮತ್ತೆ ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದಾರೆ ಎನ್ನತಕ್ಕ ಒಂದೇ ಮಾತಿನ ಮೇಲೆ ಇವತ್ತು 5 ಟಿ.ಎಂ.ಸಿ. ನೀರನ್ನು ತಮಿಳು ನಾಡಿಗೆ ಬಿಡುವಂಥ ನಿರ್ಧಾರವನ್ನು ಮಾನ್ಯ ಮುಖ್ಯ ಮಂತ್ರಿಗಳು ಕೈಗೊಂಡರೆ? ಇಲ್ಲಿ ನಮ್ಮ ರಾಜ್ಯದ ಜನತೆಯ ಹಿತಾಸಕ್ತಿಯನ್ನು ಬಲಿಗೊಟ್ಟು, ದೇವೇಗೌಡರು ಪ್ರಧಾನ ಮಂತ್ರಿಗಳಾಗಿರಬೇಕೆಂಬ ಒಂದೇ ವಿಚಾರ ಧಾರೆಯಿಂದ ಈ ನಿರ್ಧಾರವನ್ನು ಕೈಗೊಂಡಿದ್ದಾರೆಂಬ ಮಾತನ್ನು ಹೇಳಬೇಕಾಗಿದೆ. ಏಕೆಂದರೆ ತಮಿಳುನಾಡಿಗೆ ನೀರನ್ನು ಸರಬರಾಜು ಮಾಡುವ ಉದ್ದೇಶ ಏನಾದರೂ ಇವರಿಗೆ ಇದ್ದಿದ್ದರೆ ಮತ್ತೊಮ್ಮೆ ಇವತ್ತು ಸರ್ವ ಪಕ್ಷಗಳ ನಾಯಕರ ಸಭೆಯನ್ನು ಕರೆದು ಈ ರೀತಿ ಮಾನ್ಯ ದೇವೇಗೌಡರು ಹೇಳಿದ್ದಾರೆ, ನಾವು ಏನು ಮಾಡಬೇಕೆಂದು ಕೇಳುವಂಥ ಒಂದು ಔದಾರ್ಯತೆಯನ್ನೂ ತೋರಿಸದೆ ಏಕಾ ಏಕಿಯಾಗಿ ತಮಿಳುನಾಡಿಗೆ ನೀರನ್ನು ಬಿಡುವಂಥ ನಿರ್ಣಯವನ್ನು ಮಾಡಿದ್ದು ಸಂಪೂರ್ಣವಾಗಿ ತಪ್ಪು ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ. ಇವತ್ತು ನಾವು ಜನತೆಗೆ ಉತ್ತರಿಸಬೇಕಾಗಿದೆ. ಇದು ಅತಿ ಮಹತ್ವದ ಸಾರ್ವಜನಿಕವಾದ ಮತ್ತು ಗಂಭೀರವಾದ ವಿಚಾರ ಆಗಿರುವುದರಿಂದ ಇವತ್ತು ಈ ಸಭೆಯ ಪ್ರಶ್ನೋತ್ತರ ವೇಳೆಯನ್ನೂ ಒಳಗೊಂಡಂತೆ ಎಲ್ಲಾ ಕಾರ್ಯಕಲಾಪಗಳನ್ನೂ ಬದಿಗಿಟ್ಟು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

★ **ಶ್ರೀ ವಾಟಾಳ್ ನಾಗರಾಜ್(ಚಾಮರಾಜ ನಗರ):-** ಮಾನ್ಯ ಅಧ್ಯಕ್ಷರೆ, ಹಿಂದೆ ಇವರದೇ ಪಕ್ಷದ ಸರ್ಕಾರದಲ್ಲಿ ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದರು. ಆಗ ಯಾರನ್ನೂ ಹೇಳದೆ

ಕೇಳದೆ 5 ಟಿ.ಎಂ.ಸಿ. ನೀರನ್ನು ಬಿಟ್ಟರಿ ಎಂದು ಬಹಳ ದೊಡ್ಡ ಪ್ರತಿಭಟನೆ, ಹೋರಾಟ, ಇಡೀ ರಾಜ್ಯದ ಉದ್ದಗಲಕ್ಕೂ ನಡೆಯಿತು. ಅದರ ನಂತರ ಮತ್ತೆ 6 ಟಿ.ಎಂ.ಸಿ. ನೀರನ್ನು ತಮಿಳ್ನಾಡಿಗೆ ಬಿಟ್ಟರು. 5 ಟಿ.ಎಂ.ಸಿ. ನೀರನ್ನು ಬಿಟ್ಟಾಗಲೇ ಈ ಸರ್ಕಾರ ಮಾಡಿರತಕ್ಕದ್ದು ಅನ್ಯಾಯ ಎಂದು ಪ್ರತಿಭಟನೆ ತೀವ್ರವಾಗಿ ಆಯಿತು. 6 ಟಿ.ಎಂ.ಸಿ. ನೀರನ್ನು ಬಿಡುವುದಕ್ಕಾಗಿ ಎಲ್ಲಾ ವಿರೋಧ ಪಕ್ಷಗಳ ಕೊರಳಿಗೆ ಹಗ್ಗ ಹಾಕುವ ಪ್ರಯತ್ನ ಮಾಡಿದರು. ಏಕೆಂದರೆ ತಮ್ಮ ಒಂದೇ ಕೊರಳಿಗೆ ಹಗ್ಗ ಬರುತ್ತದೆಂದು ತಿಳಿದು ಹಗ್ಗವನ್ನು ಅಗಲವಾಗಿ ಮಾಡಿ ಎಲ್ಲಾ ಪಕ್ಷಗಳ ಕತ್ತನ್ನೂ ಸಿಕ್ಕಿಸಿ ಒಂದೇ ಸಾರಿಗೆ ಎಳೆದರು. 6 ಟಿ.ಎಂ.ಸಿ. ನೀರನ್ನು ಬಿಟ್ಟರು. 6 ಟಿ.ಎಂ.ಸಿ. ನೀರನ್ನೇ ಅಲ್ಲ ಕೇವಲ ಒಂದೇ ಒಂದು ಹನಿ ನೀರನ್ನೂ ಬಿಡಬಾರದೆಂಬುದು ನನ್ನ ನಿಲುವು. ಇದು ಸ್ಪಷ್ಟ. ನ್ಯಾಯ ಮಂಡಲಿಯನ್ನು ಸಂಪೂರ್ಣವಾಗಿ ರದ್ದುಪಡಿಸಬೇಕು. ಆ ನ್ಯಾಯ ಮಂಡಲಿ ನಮಗೆ ಬೇಕಾಗಿಲ್ಲ ಎಂಬುದು ನನ್ನ ಅಚಲವಾದ ನಿಲುವು; ಇದು ಮೊದಲಿನಿಂದಲೂ ಇರುವಂಥಾದ್ದು. ಇವತ್ತು ವಿರೋಧ ಪಕ್ಷಗಳ ಮುಖಂಡರ ಬಗ್ಗೆ ಸರ್ಕಾರಕ್ಕೆ ಗೌರವ ಇದೆಯೆಂದು ನಾವು ತಿಳಿದುಕೊಂಡಿದ್ದೇವೆ. ಸರ್ಕಾರ ನಿನ್ನೆ ಬಹಳ ಪ್ರೀತಿ ವಿಶ್ವಾಸದಿಂದ ಎಲ್ಲಾ ವಿರೋಧ ಪಕ್ಷಗಳ ಮುಖಂಡರನ್ನೂ ಸಭೆಗೆ ಕರೆದು ಅಲ್ಲಿ ಎಲ್ಲವನ್ನೂ ಸವಿಸ್ತಾರವಾಗಿ ಚರ್ಚೆ ಮಾಡಿ, ಮತ್ತೊಂದು ವಿಚಾರ ಬಹಳ ಗೌಪ್ಯವಾದುದಾಗಿದೆ, ಅದನ್ನು ಇಲ್ಲಿ ಹೇಳುವುದು ಬೇಡ, ಬೇರೆಡೆ ಹೇಳುತ್ತೇನೆ ಎಂದು ಹೇಳಿದರು. ಅದರಂತೆ ನಾವು ಕೂಡ ಸುಮ್ಮನಾದೆವು. ಇವರು ನೀರನ್ನು ಬಹುಶಃ ಬಿಡುವುದಿಲ್ಲ ಎಂದು ಕಾಣಿಸುತ್ತದೆ, ನಿಜವಾಗಿ ಅದು ಗೌಪ್ಯ ವಿಚಾರ ಇರಬಹುದು ಎಂದು ನಾವು ಅಂದುಕೊಂಡೆವು. ನಾನು ಪ್ರಾರಂಭದಲ್ಲೇ ಹೇಳಿದೆ, ನನ್ನ ನಿಲುವು ಸ್ಪಷ್ಟವಾಗಿದೆ. ಇದರಿಂದ ಮುಂದೆ ಹೋಗುವಂಥ ಪ್ರಶ್ನೆ ಇಲ್ಲವೆಂದು ನಾನು ಮೊದಲು ಮಾತನಾಡಿ ಸರ್ಕಾರ ನೀರನ್ನು ಬಿಡಬಾರದೆಂದು ಒತ್ತಾಯ ಮಾಡಿ ಹೊರಗೆ ಬಂದೆ. ನೀರನ್ನು ಬಿಡಬಾರದೆಂಬುದು ನನ್ನ ಸ್ಪಷ್ಟ ನಿಲುವು. ಮಾನ್ಯ ಸದಸ್ಯರಾದ ಖರ್ಗೆಯವರು ಹೇಳಿದರು, ಈಗಲಾದರೂ ನೀರನ್ನು ನಿಲ್ಲಿಸಿ ಎಂದು. ಆ ನೀರನ್ನು ನಿಲ್ಲಿಸುವ ಮಟ್ಟದಲ್ಲಿಲ್ಲ. ಏಕೆಂದರೆ, ಅಲ್ಲಿ ಬಾಗಿಲನ್ನೆಲ್ಲಾ ತೆರೆದಿದ್ದಾರೆ. ನೀವು ಇಲ್ಲಿಂದ ಹೋಗಿ ಮುಚ್ಚುವ ಹೊತ್ತಿಗೆ ಎಷ್ಟು ನೀರು ಹೋಗುತ್ತದೆಂದು ಯಾರೂ ಲೆಕ್ಕ ಹಾಕಿಲ್ಲ. ಆ ನೀರನ್ನು ನಿಲ್ಲಿಸಿದ ಕೂಡಲೇ ನಮಗೆ ಉಪಕಾರವಾಗುತ್ತದೆಂದು ನಾವೇನೂ ಅಂದುಕೊಂಡಿಲ್ಲ. ಈಗ ಹೋಗುವುದೆಲ್ಲಾ ಹೋಗಿದೆ. ನಿನ್ನೆ ನಮ್ಮನ್ನು ಇವರು ಸಭೆಗೆ ಕರೆಯಬೇಕಾಗಿರಲಿಲ್ಲ. ವಿರೋಧ ಪಕ್ಷಗಳ ಸಭೆಯನ್ನು ಕರೆದು ನಮ್ಮ ಅಭಿಪ್ರಾಯವನ್ನು ಕೇಳುವಂಥ ಪರಿಸ್ಥಿತಿಗೆ ಹೋಗಬೇಕಾಗಿರಲಿಲ್ಲ. ಕಳೆದ 15 ದಿನಗಳಿಂದ ನಡೆದಂಥ ವಿದ್ಯಮಾನಗಳ ಬಗ್ಗೆ ತಮ್ಮ ಗಮನವನ್ನು ಸೆಳೆಯುವುದಾದರೆ, ದೆಹಲಿಯಲ್ಲಿ ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ತಮಿಳುನಾಡಿನ ಮುಖ್ಯ ಮಂತ್ರಿಯವರೂ, ಕರ್ನಾಟಕದ ಮುಖ್ಯ ಮಂತ್ರಿಯವರೂ ಸೇರಿ ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಬಹುದೆಂಬ ಆಶಾಭಾವನೆಯಿಂದ ಸೇರಿದ್ದರು. ಮಾತುಕತೆಯ ಮೂಲಕ ಮುಗಿಸೋಣವೆಂದು ನಮ್ಮ ಮುಖ್ಯ ಮಂತ್ರಿಗಳೂ ಕೂಡ ಅನೇಕ ಕಡೆಗಳಲ್ಲಿ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ತಮಿಳುನಾಡಿನ ಮುಖ್ಯ ಮಂತ್ರಿಯಾದ ಕರುಣಾನಿಧಿಯವರು ಏನು ಹೇಳಿದ್ದಾರೆಂದರೆ, ಮಾತುಕತೆಯ ಪ್ರಶ್ನೆಯೇ ಇಲ್ಲ, ನಾವು ನ್ಯಾಯ ಮಂಡಲಿಯ ವ್ಯಾಪ್ತಿಯನ್ನು ಬಿಟ್ಟು ಬೇರೆ ಮಾತೇ ಇಲ್ಲ ಎಂದು ಹೇಳಿದ್ದಾರೆ. ನಿನ್ನೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಏನು ಹೇಳಿದ್ದಾರೆಂದರೆ, ನ್ಯಾಯ ಮಂಡಲಿಯ ಅಧ್ಯಕ್ಷರು ತಮ್ಮ

ರಾಜಿನಾಮೆಯನ್ನು ಏನು ಕೊಟ್ಟಿದ್ದಾರೆ ಆ ರಾಜಿನಾಮೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು, ತಾವೇ ಬರುವಂತೆ ಒತ್ತಾಯ ಮಾಡಬೇಕೆಂದು ಹೇಳಿದ್ದಾರೆ. ಅವರೇ ಮತ್ತೊಂದು ಕಡೆ ಹೇಳಿದ್ದಾರೆ, ಇನ್ನೊಬ್ಬ ಅಧ್ಯಕ್ಷರನ್ನು ನೇರವಾಗಿ ನೇಮಿಸಬೇಕೆಂದು ಹೇಳಿದ್ದಾರೆ. ಇದೆಲ್ಲಾ ಒಂದು ಕಡೆಯಾದರೆ, 12ನೇ ತಾರೀಖು ಕರುಣಾನಿಧಿಯವರ ಸರ್ಕಾರ ರಾಜಿನಾಮೆಯನ್ನು ಕೊಡಬೇಕೆಂದು ತಮಿಳ್ನಾಡಿನಾದ್ಯಂತ ಎಂ. ಡಿ. ಕೆ. ಪಕ್ಷವೂ ಸೇರಿದಂತೆ ತಮಿಳ್ನಾಡಿನ ಎಲ್ಲ ವಿರೋಧ ಪಕ್ಷಗಳೂ ಚಳುವಳಿಯನ್ನು ಮಾಡಿವೆ. ಆ ಚಳುವಳಿಯ ಒಟ್ಟಾರೆ ಅಭಿಪ್ರಾಯ ಏನೆಂದರೆ, ಮೊದಲನೆಯದು ಸರ್ಕಾರ ರಾಜಿನಾಮೆಯನ್ನು ಕೊಡಬೇಕು, ಎರಡನೆಯದಾಗಿ ದೆಹಲಿಯ ಸಂಯುಕ್ತ ರಂಗದಿಂದ ಹೊರಗೆ ಬರಬೇಕು. ಡಿ. ಎಂ. ಕೆ. ಮತ್ತು ಮನಿಲಾ ಕಾಂಗ್ರೆಸ್ ಪಕ್ಷಗಳೆರಡೂ ಸಂಯುಕ್ತ ರಂಗ ಸರ್ಕಾರದಿಂದ ಹೊರಗೆ ಬರಬೇಕು. ಇಲ್ಲಿ ಅತ್ಯಂತ ಗೌಪ್ಯವಾಗಿ ಏನೂ ಉಳಿದಿಲ್ಲ. ನಿನ್ನೆ ತರಾತುರಿಯಲ್ಲಿ ಸಭೆ ಸೇರಿದಿರಿ. ಗೌಪ್ಯವಾಗಿ ನಮಗೆ ಏನನ್ನೋ ಹೇಳಬೇಕೆಂದು ಹೇಳಿದಿರಿ, ಅದನ್ನೂ ಹೇಳಲಿಲ್ಲ. ನೀವು ನೀರನ್ನು ಬಿಡುತ್ತೇವೆಂಬ ನಿರ್ಧಾರ ಹೊಂದಿದ್ದರೆ ನಾವು ವಿರೋಧ ಮಾಡುವ ವಿಚಾರ ಬೇರೆ. ಅಂಥ ವಿಚಾರ ಇದ್ದಿದ್ದರೆ ನೀವು ಹನ್ನೆರಡು ಗಂಟೆ ರಾತ್ರಿಯಲ್ಲಿ ಕರೆದಿದ್ದರೂ ನಾವೆಲ್ಲರೂ ಬರುತ್ತಿದ್ದೆವು. ನಾವು ನೀರನ್ನು ಬಿಡುತ್ತೇವೆ ಎಂದು ಹೇಳಿದ್ದಿದ್ದರೆ ಅದು ಬೇಡ ಎಂದು ನಾವು ಹೇಳುತ್ತಿದ್ದೆವೋ ಬೇಕು ಎಂದು ಹೇಳುತ್ತಿದ್ದೆವೋ ಅದು ಅನಂತರದ ನಮ್ಮ ತೀರ್ಮಾನ. ಇವತ್ತು ರಾತ್ರಿ ಪತ್ರಿಕಾ ಕಾರ್ಯಾಲಯಕ್ಕೆ ಏನು ವರದಿ ಹೋಗುತ್ತಿದೆ ಎಂದರೆ, ನೀರನ್ನು ಬಿಡುವಂಥ ನಿರ್ಧಾರ ಆಗಿ ಹೋಗಿದೆ ಎಂದು. ಅಂದರೆ ಹಿಂದಿನ ಮುಖ್ಯ ಮಂತ್ರಿಗಳು ಇವತ್ತು ಅಲ್ಲಿ ಪ್ರಧಾನ ಮಂತ್ರಿ ಆಗಿದ್ದಾರೆ. ಸಂಯುಕ್ತ ರಂಗ ಸರ್ಕಾರವನ್ನು ಉಳಿಸುವಂಥ ಒಂದೇ ಒಂದು ದೃಷ್ಟಿಯಿಂದ ಕರ್ನಾಟಕ ರಾಜ್ಯದ ರೈತರನ್ನು, ಕನ್ನಡ ನಾಡಿನ ಜನತೆಯನ್ನು ಇವತ್ತು ಬಲಿಪಶುಗಳನ್ನಾಗಿ ಮಾಡಿದ್ದೀರಿ, ಇದರಲ್ಲಿ ಬೇರೆ ಅಭಿಪ್ರಾಯವೇ ಇಲ್ಲ. ಎಂಬ ನನ್ನ ಸ್ಪಷ್ಟ ಅಭಿಪ್ರಾಯವನ್ನು ತಮಗೆ ಹೇಳುತ್ತಿದ್ದೇನೆ. ಹಾಗಾದರೆ ನಾನಾದರೂ ತಮ್ಮನ್ನು ಕೇಳುತ್ತೇನೆ. ನಿಮಗೆ ಈ ಸದನ ಬೇಕಿಲ್ಲವೆ ? ಅಥವಾ ಈ ಸದನದ ಬಗ್ಗೆ ನಿಮಗೆ ಗೌರವ ಇಲ್ಲವೇ ಬಹುಶಃ ನನಗೆನಿಸುತ್ತದೆ, ನೀವೂ ಕೂಡ ಬಲಿಪಶುವಾಗಿದ್ದೀರಾ ? ಯಾರೋ ಒಂದು ಗುಂಡಿಯನ್ನು ಒತ್ತಿದರೆ ಅದಕ್ಕೆ ತಕ್ಕಂತೆ ಪಾತ್ರವನ್ನು ಮಾಡುವಂತ ಸೂತ್ರದ ಗೊಂಬೆ ಆಗಿದ್ದೀರಿ? ನಿಮ್ಮ ವ್ಯಕ್ತಿತ್ವದ ಬಗ್ಗೆ ನನಗೆ ಅಪಾರವಾದ ಪ್ರೀತಿ ವಿಶ್ವಾಸ ಇದೆ . ಆದರೆ ಈಗ ಸಂಶಯ ಏತಕ್ಕೆ ಬಂದಿದೆ ಎಂದರೆ ನೀವು ಯಾವಾಗ ನೀರನ್ನು ಅವರಲ್ಲಗೆ ಬಿಡತಕ್ಕ ಕೆಲಸವನ್ನು ಮಾಡಿದಿರಿ ಆಗ ನನಗೆ ಸಂಶಯ ನಿಮ್ಮ ಬಗ್ಗೆ ಬಂತು. ನೀವು ಇವತ್ತು ಈ ರಾಜ್ಯದ ಜನತೆಯನ್ನು ಕಡೆಗಾಣಿಸಿದ್ದೀರಿ, ಈ ಜನತೆಯ ಪ್ರತಿನಿಧಿಗಳಾದ ಸಾರ್ವಭೌಮತ್ವವನ್ನು ಪಡೆದಿರತಕ್ಕ ಈ ಸಭೆಯನ್ನು ಕಡೆಗಾಣಿಸಿದ್ದೀರಿ. ವಿರೋಧಪಕ್ಷದ ಮುಖಂಡರನ್ನು ಒಂದು ರೀತಿಯ ತೋರಿಕೆಗೆ ಇಟ್ಟುಕೊಂಡಿದ್ದೀರಿ. ಕೇಂದ್ರದಲ್ಲಿ ಪ್ರಧಾನ ಮಂತ್ರಿಗಳು ತಮ್ಮ ಅಧಿಕಾರದ ಗದ್ದುಗೆಯನ್ನು ಉಳಿಸಿಕೊಳ್ಳುವ ಒಂದೇ ಒಂದು ತೀರ್ಮಾನಕ್ಕಾಗಿ ಈ ಕರ್ನಾಟಕವನ್ನು ಬಲಿಕೊಡುತ್ತಿದ್ದೀರಿ, ಜನರು ಬೀದಿಗೆ ಇಳಿದರೆ ನಮ್ಮಲ್ಲಿ ಬಂದೂಕು ಇದಕ್ಕೆ, ಗುಂಡು ಇದೆ, ಹೊಡೆದು ಅವರನ್ನೆಲ್ಲಾ ರಸ್ತೆ ಯಲ್ಲಿ ಮಲಗಿಸುತ್ತೇವೆ, ಇಂಥಾದ್ದನ್ನೆಲ್ಲಾ ನಾವು ನೋಡಿದ್ದೇವೆ ಎಂದು ಹೇಳಬಹುದು. ಅದು ಇದ್ದರೂ ಇರಬಹುದು. ನನಗನ್ನಿಸುತ್ತದೆ ಇದರ ವಿರುದ್ಧ ಜನರನ್ನು ನಾವೇನೂ ಎತ್ತಿಕಟ್ಟಬೇಕಾಗಿಲ್ಲ. ಎಲ್ಲಿಯವರೆಗೆ ನೀವು ಜನರನ್ನು ಈ ರೀತಿ ಕಗ್ಗತ್ತಲಲ್ಲಿ ಇಡುತ್ತೀರಿ? ಎಲ್ಲಿಯವರೆಗೆ ಜನರಿಗೆ ಈ ರೀತಿ

ಮೋಸಮಾಡುತ್ತೀರಿ? ನೀವು ಅಧಿಕಾರಕ್ಕೆ ಬಂದ ಮೂರೇ ದಿನದೊಳಗೆ ಇಂಥ ಒಂದು ಗೊಂದಲಕ್ಕೆ ಸಿಕ್ಕಿದ್ದೀರಲ್ಲಾ ಎಂಬ ನೋವು ನನಗೆ ಒಂದು ಕಡೆ ಇದೆ. ಇವತ್ತು ತಮಿಳುನಾಡಿಗೆ ನೀರನ್ನು ಬಿಟ್ಟಂಥ ವಿಚಾರವನ್ನು ಈ ಸಭೆಯಲ್ಲಿ ಸ್ಪಷ್ಟಪಡಿಸಬೇಕು. ಏಕೆಂದರೆ ನಿನ್ನೆ ತಾನೆ ದೂರದರ್ಶನದ ಸಂದರ್ಶನದಲ್ಲಿ ಏನು ಹೇಳಿದ್ದೀರಿ ? ಎಂದರೆ ನಮ್ಮಲ್ಲಿ ಖಂಡಿತ ನೀರಿಲ್ಲ ಒಂದು ಹನಿ ಕೂಡ ನೀರಿಲ್ಲ ಎಂದರೆ ಇನ್ನು ಬಿಡುವುದಾದರೂ ಎಲ್ಲಿಂದ ಎನ್ನತಕ್ಕ ಮಾತುಗಳನ್ನು ಬಹಳ ಕೋಪದಿಂದ ಹೇಳಿದ್ದೀರಿ. ಆದರೆ ಇವತ್ತು ಏಕಾಏಕಿ ನೀರನ್ನು ಬಿಡಬೇಕಾದರೆ ನಿಮಗೆ ಇದ್ದಂಥ ಮುಖ್ಯ ಕಾರಣಗಳಾದರೂ ಏನು ಎಂಬುದನ್ನು ತಾವು ಸ್ಪಷ್ಟಪಡಿಸಬೇಕು. ಇವತ್ತು ಇದರ ಬಗ್ಗೆ ಸಮಗ್ರ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅದನ್ನು ಬಿಟ್ಟು ಈ ಸದನದಲ್ಲಿ ಬೇರೆ ಯಾವುದೇ ಕಾರ್ಯ ಕಲಾಪಗಳೂ ನಡೆಯುವುದು ಬೇಡ. ಈಗ ತಂದಿರತಕ್ಕ ನಿಲುವಳಿ ಸೂಚನೆ ಯಾರದ್ದೇ ಹೆಸರಿನಲ್ಲಾದರೂ ಇರಲಿ ಅದನ್ನು ಚರ್ಚೆಗೆ ತಾವು ತೆಗೆದುಕೊಳ್ಳಬೇಕು. ಇದರ ಬಗ್ಗೆ ಸರ್ಕಾರ ತನ್ನ ಸ್ಪಷ್ಟ ನಿಲುವು ಏನು ಎಂಬುದನ್ನು ಹೇಳಬೇಕು. ಸರ್ಕಾರ ಈ ರೀತಿಯ ಮೊಂಡುತನದಿಂದ ಜನರನ್ನು . . . .

ಅಧ್ಯಕ್ಷರು:- ಅವರು ಇನ್ನೂ ಹೇಳುತ್ತಿದ್ದಾರೆ ಇದರಲ್ಲಿ ಮೊಂಡು ಏನು ಇಲ್ಲ. ಅವರು ಇನ್ನೂ ಏನನ್ನೂ ಹೇಳುವುದಕ್ಕೆ ಮುಂಚಿತವಾಗಿ ನೀವೇ ಅವರ ಪರವಾಗಿ ರೂಲಿಂಗ್ ಕೊಟ್ಟರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್:- ನೀರನ್ನು ಬಿಟ್ಟಿದ್ದೇ ಇವರ ಮೊಂಡು ಅಲ್ಲವೆ? ಹಠಮಾರಿತನ ಮೊಂಡುತನ ಎಲ್ಲಾ ಒಂದೇ.

ಅಧ್ಯಕ್ಷರು:- ನಮಗೆ ಅಷ್ಟೂ ಗೊತ್ತಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನೀವು ಇತ್ತೀಚೆಗೆ ಈ ರೀತಿ ಮಾತನಾಡುವುದು ಸರಿಯಲ್ಲ. ನಾನೇನು ಸಣ್ಣ ಮಗುವಲ್ಲ. ನನಗೂ ಅರ್ಥವಾಗುತ್ತದೆ. ನಾನು 1967 ರಲ್ಲಿ ಸದಸ್ಯನಾಗಿ ಇಲ್ಲಿಗೆ ಬಂದಿದ್ದೇನೆ. ನನಗೆ ಅರ್ಥವಾಗುವುದಿಲ್ಲವೆ ನಾಗೇಗೌಡರೆ?

ಅಧ್ಯಕ್ಷ:- ನಿಮಗೂ ನಾಗೇಗೌಡರಿಗೂ ಅರ್ಥವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಪಾಪ ನಾಗೇಗೌಡರು ಸಿಕ್ಕಿ ಹಾಕಿಕೊಂಡರಲ್ಲ ಎಂದು ನನಗನ್ನಿಸುತ್ತದೆ.

ಅಧ್ಯಕ್ಷರು:- ಅವರೇನೂ ಸಿಕ್ಕಿ ಹಾಕಿಕೊಳ್ಳುವುದಿಲ್ಲ. ಸುಲಭವಾಗಿ ಈಜಿಕೊಂಡು ಬಂದು ಬಿಡುತ್ತಾರೆ. ಅವರು ಬಹಳ ಅಸಾಧ್ಯರು.

ಶ್ರೀ ವಾಟಾಳ್ ನಾಗರಾಜ್:- ನೀವು ಅಷ್ಟು ಅವರಿಗೆ ಧೈರ್ಯ ಕೊಡುವುದಾದರೆ ನನ್ನದೇನು ಅಭ್ಯಂತರವಿಲ್ಲ. ಈ ಸರ್ಕಾರದ ನಿಜವಾಗಿ ಒಂದು ರೀತಿ ಕೈಗೊಂಬೆ ಸರ್ಕಾರವಾಗಿದೆ. ನೀವು ಏನಾದರೂ ಹೇಳಿಕೊಳ್ಳಿ ಎಂಬ ಭಾವನೆ ನಿಮ್ಮಲ್ಲಿ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ಈ ಮಾತನ್ನು ತಮ್ಮ ಮೂಲಕ ನಾನು ಅವರಿಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು:- ಖಂಡಿತ ಇಲ್ಲ.

ಶ್ರೀ ಎನ್ .ರಾಜಣ್ಣ:- ವಿರೋಧ ಪಕ್ಷದ ನಾಯಕರೆಲ್ಲ ಹೇಳುತ್ತಿದ್ದಾರೆ. ಪ್ರಧಾನ ಮಂತ್ರಿಯವರು ಅವರ ಗದ್ದುಗೆಯನ್ನು ಉಳಿಸಿಕೊಳ್ಳುವುದಕ್ಕೆ ಎಂದು. ಆದರೆ ಪ್ರಧಾನ ಮಂತ್ರಿಗಳು ಗದ್ದುಗೆ ಉಳಿಸಿಕೊಂಡದ್ದಕ್ಕೋಸ್ಕರ ಈ ದೇಶದ 70 ಪರ್ಸೆಂಟ್ ರೈತರಿಗೆ ಒಂದು ಮೂಟೆ ಡಿಎಬಿ ಮೇಲೆ

ನೂರು ರೂಪಾಯಿ, ಯೂರಿಯ ಮೇಲೆ 25 ರಿಂದ 30 ರೂಪಾಯಿ . . . . .

(ಗೊಂದಲ)

ಶ್ರೀ ಎನ್.ರಾಜಣ್ಣ:- 70 ಲಕ್ಷ ಟನ್ ಕಬ್ಬು ಕೊಳೆಯುತ್ತಿದೆಯಲ್ಲ ಅದಕ್ಕೆ 14 ಫ್ಯಾಕ್ಟರಿಗಳು ಬಂದಿರತಕ್ಕದ್ದು ಇವರ ಗದ್ದುಗೆಯಿಂದ ಎಂದು ನಾವೆಲ್ಲ ತಿಳಿದುಕೊಳ್ಳಬೇಕು ಸ್ವಾಮಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನೀರಿಲ್ಲ ಬೆಳೆಯಿಲ್ಲ ಎಂಬವರೆ ಗೊಬ್ಬರವನ್ನು ಎಲ್ಲಿ ತೆಗೆದುಕೊಂಡು ಹೋಗಿ ಹಾಕಬೇಕು.

ಅಧ್ಯಕ್ಷರು:- ಅವರು ಗೊಬ್ಬರ ಸ್ಟಾಕ್ ಮಾಡಲಿ, ನೀವು ನೀರು ಸ್ಟಾಕ್ ಮಾಡಿ. ಆ ಮೇಲೆ ಒಟ್ಟಿಗೆ ಸೇರಿ ಹೇಗೆ ಮಾಡಬೇಕೆಂದು ಆಲೋಚನೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:- ರಾಜಣ್ಣವನರು ಹೇಳಿದ ಹಾಗೆ ನೀರನ್ನು ತಮಿಳುನಾಡಿಗೆ ಕೊಟ್ಟು, ಗೊಬ್ಬರವನ್ನು ನೀವು ಕರ್ನಾಟಕ ಜನ ತಿಂದುಕೊಂಡು ಕುಳಿತಿರಿ ಎಂದು ಗೊಬ್ಬರವನ್ನು ಕೊಟ್ಟಿರಬಹುದು. ಕರ್ನಾಟಕದ ಜನ ಗೊಬ್ಬರ ತಿನ್ನಿ ಎಂದು ಹೇಳಿರಬಹುದು.

ಅಧ್ಯಕ್ಷರು:- ಅಲ್ಲಿ ಮೂಲೆಯಲ್ಲಿ ಯಾರೋ ಕಾಲೇಜ್ ಸ್ಟೂಡೆಂಟ್ ಬಂದು ಕುಳಿತ ಹಾಗೆ ಇದೆಯಲ್ಲ?

(ಮಾನ್ಯ ಸದಸ್ಯರಾದ ಶ್ರೀ ಪುಟ್ಟಣಯ್ಯನವರು ಮತ್ತು ಶ್ರೀ ಶ್ರೀರಾಮರೆಡ್ಡಿಯವರು ಇಬ್ಬರೂ ಮಾತನಾಡಲು ನಿಂತರು)

ಅಧ್ಯಕ್ಷರು:- ನೀವು ಇಬ್ಬರೂ ಗೆಳೆಯರು. ಅವರು ಕಾವೇರಿ ಪಕ್ಕದಲ್ಲಿರುವಂಥ ಅವರಿಗೆ ಪ್ರಾಧಾನ್ಯತೆ ಕೊಡೋಣ. ನಿಮಗೆ ನಮಗೆ ಕೋಲಾರದವರಿಗೆ ಕಾವೇರಿಯೂ ಇಲ್ಲ, ಪಿನಾಕಿನಿಯೂ ಇಲ್ಲ.

(ಗೊಂದಲ)

ಶ್ರೀ ಜಿ.ವಿ.ಶ್ರೀ ರಾಮರೆಡ್ಡಿ:- ಕೋಲಾರದವರಿಗೆ ನೀರು ಕೊಟ್ಟಿಲ್ಲ, ನೀವು ಏತಕ್ಕೆ ಮಾತನಾಡುತ್ತಿರೆಂದು ಅಧ್ಯಕ್ಷರು ಹೇಳುತ್ತಿದ್ದಾರೆ. ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು:- ಅವರು ನಮ್ಮ ಮಧ್ಯೆ ಜಗಳ ತಂದಿಡುವುದಕ್ಕೆ ಏನು ಬೇಕೋ ಅದನ್ನು ಹೇಳುತ್ತಾರೆ ನೀವು ಸ್ವಲ್ಪ ಹುಷಾರಾಗಿರಿ.

ಶ್ರೀ ವಾಟಾಳ್ ನಾಗರಾಜ್:- ಹೊಸದಾಗಿ ರಾಗ ಶುರು ಮಾಡುತ್ತಿದ್ದೀರಲ್ಲ, ಏತಕ್ಕೆ ಇದು? ಅದು ಬಿಡಿ. ಮಾನ್ಯ ನಾಗೇಗೌಡರು ಸರಿಪಡಿಸೋಣವೆಂದು ಹೇಳುತ್ತಿದ್ದಾರೆ, ಆದ್ದರಿಂದ ನಾನು ಕುಳಿತುಕೊಳ್ಳುತ್ತೇನೆ.

★ ಶ್ರೀ ಕೆ.ಎಸ್.ಪುಟ್ಟಣಯ್ಯ (ಪಾಂಡವಪುರ):- ಮಾನ್ಯ ಅಧ್ಯಕ್ಷರೆ, ನಿನ್ನೆ ತಾನೇ ವಿರೋಧ ಪಕ್ಷಗಳಸಭೆ ಕರೆದು ಕಾವೇರಿ ವಿಚಾರದ ಬಗ್ಗೆ ಅತ್ಯಂತ ಜವಾಬ್ದಾರಿಯುತವಾಗಿ ಚರ್ಚೆ ಮಾಡಿ ಎಲ್ಲಾ ಡ್ಯಾಂಗಳಲ್ಲೂ ಎಷ್ಟು ನೀರಿನ ಲಭ್ಯತೆ ಇದೆ ಎಂಬ ವಿಷಯವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ, ರಾತ್ರೋರಾತ್ರಿ ನೀರು ಬಿಟ್ಟಿದ್ದಾರೆಂಬ ವಿಚಾರ ಈಗ ಗೊತ್ತಾಯಿತು. ನನಗೂ ಆಶ್ಚರ್ಯವಾಯಿತು. ಇಲ್ಲಿ ಏನಾಗಿದೆ ಎಂದರೆ, ಕರ್ನಾಟಕ ಸರ್ಕಾರ ಒಂದು ರೀತಿ ನೀರು ಗುಂಟಿ ಕೆಲಸ ಮಾಡುತ್ತಿದೆ ಎಂಬ ಅನುಮಾನ ಬಂದಿದೆ. ಎಕ್ಸಿಕ್ಯೂಟೀವ್ ಇಂಜಿನಿಯರ್ ಸವಡೆಗಳ ನೀರು ಎತ್ತು ಎಂದರೆ ಬಚ್ಚಲು

ನೀರು ಎತ್ತತಕ್ಕ ಪರಿಸ್ಥಿತಿಯಾಗಿದೆ. ನಮ್ಮನ್ನು ವಿರೋಧ ಪಕ್ಷದವರನ್ನು ಸಭೆ ಕರೆಯುವ ಔದಾರ್ಯ ತಾನೆ ಏನಿತ್ತು? ನಾವು ಇಲ್ಲಿ ಮಾತನಾಡುವುದರಿಂದ ಪ್ರಯೋಜನವೇನು ಇಡೀ ಕರ್ನಾಟಕದ ಹಿತವನ್ನು ಬಲಿ ಕೊಟ್ಟು ನೀರನ್ನು ಕೊಟ್ಟಿದ್ದಾರೆ. ಹೋದ ಸಾರಿ 6 ಟಿ ಎಂ ಸಿ ನೀರು ಕೊಟ್ಟಾಗಲೇ ಮಂಡ್ಯ ಜಿಲ್ಲೆಯಲ್ಲಿರತಕ್ಕ ರೈತರಿಗೆ 25 ಭಾಗ ಬೆಳೆ ಈಗಾಗಲೇ ಹಾನಿಯಾಗಿದೆ. ನಮ್ಮ ಅದೃಷ್ಟಕ್ಕೋ ಏನೋ 15-20 ಅಡಿ ನೀರು ಬರಲಾಗಿ ಪ್ರಕೃತಿ ಸ್ವಲ್ಪ ನಮಗೆ ಸಹಾಯ ಮಾಡಲಾಗಿ ಕೃಷ್ಣರಾಜ ಸಾಗರದಲ್ಲಿರತಕ್ಕ ಸಾವಿರಾರು ಕೋಟಿ ರೂಪಾಯಿ ಬೆಳೆ ಉಳಿದುಕೊಳ್ಳತಕ್ಕ ಒಂದು ಪರಿಸ್ಥಿತಿ ಉಂಟಾಯಿತು ಮೊನ್ನೆ ಇರಿಗೇಷನ್ ಕನಸಲ್ಟೇಟಿವ್ ಕಮಿಟಿ ಮೀಟಿಂಗ್‌ನಲ್ಲಿ (ಹೆಚ್‌ಎಲ್‌ಡಿಸಿ) ಹೇಮಾವತಿ ಲೆಫ್ಟ್ ಬ್ಯಾಂಕ್‌ಗೆ ನೀರು ಕೊಡಬಹುದು, ಟೈಟ್ ಬ್ಯಾಂಕ್‌ಗೆ ನೀರು ಕೊಡುವುದಕ್ಕಾಗುವುದಿಲ್ಲ. ಲೆಫ್ಟ್ ಬ್ಯಾಂಕ್ ರೈತರು ಅಹೆ ಹಾಕಿಕೊಂಡು ನೀರಿಗೆ ಅನುಕೂಲ ಮಾಡಿಕೊಳ್ಳಿ, ಭತ್ತ ಬೆಳೆಯಿರಿ ಎಂದರು. ರೈಟ್ ಬ್ಯಾಂಕ್‌ಗೆ ನೀರು ಬಂದ ಮೇಲೆ ನೋಡೋಣವೆಂದು ಹೇಳಿದರು. ಆದ್ದರಿಂದ ಈಗ ಕರ್ನಾಟಕದಲ್ಲಿ ಹಿಂಗಾರೂ ಇಲ್ಲ, ಮುಂಗಾರೂ ಇಲ್ಲ. ಅತ್ಯಂತ ಬರಗಾಲದ ಪರಿಸ್ಥಿತಿ ಇದ್ದು ಇಡೀ ರಾಜ್ಯದಲ್ಲಿ ಇಷ್ಟೊಂದು ಕ್ಷೋಭೆ ಇರಬೇಕಾದರೆ ರಾಜಕಾರಣ, ರಾಜಕೀಯದ ಉಳಿವಿಗೆ ಸಂಯುಕ್ತ ರಂಗ ಅಧಿಕಾರದಲ್ಲಿ ಉಳಿದುಕೊಳ್ಳಬೇಕೆಂಬ ಭಾವನೆಯಿಂದ ಇದು ನಡೆಯುತ್ತಿದೆ. ಪ್ರಧಾನ ಮಂತ್ರಿಗಳು ಹಿಂದೆ ಹೇಳಿದ್ದರು, ಟ್ರಿಬ್ಯುನಲ್ ಮಧ್ಯಂತರ ತೀರ್ಪು ಏನಿದೆ ಇದು ಕರ್ನಾಟಕದ ಜನತೆಗೆ ಮರಣ ಶಾಸನ ಎಂದು ಅವರೇ ಘೋಷಣೆ ಮಾಡಿದ್ದರು. ಇವತ್ತು ಪ್ರಧಾನ ಮಂತ್ರಿಗಳು, ಹಿಂದೆ ಮುಖ್ಯ ಮಂತ್ರಿಗಳಾಗಿದ್ದವರು ಇದು ಮರಣ ಶಾಸನ, ಇಂಥ ಮರಣ ಶಾಸನವನ್ನು ಒಪ್ಪಬೇಡಿ ಎಂದರು. ಆದರೆ ಇವತ್ತು ಆ ಮರಣ ಶಾಸನದ ಮೂಲಕ ನೀರು ಬಿಟ್ಟಿದ್ದಾರೆ. ಇವತ್ತು ಕರ್ನಾಟಕದ ಜನತೆಗೆ ಬಹಳ ಅನ್ಯಾಯ ಮಾಡಿದ್ದಾರೆ. ಈ ರೀತಿ ವಿರೋಧ ಪಕ್ಷಗಳನ್ನು ಕರೆದು ರಾತ್ರೋರಾತ್ರಿ ನೀರು ಬಿಡತಕ್ಕ ವಿಚಾರದಲ್ಲಿ ಏನು ನಿಲುವಳಿ ಸೂಚನೆ ತಂದಿದ್ದಾರೆ. ಆ ಬಗ್ಗೆ ಬಹಳ ಜವಾಬ್ದಾರಿಯುತವಾಗಿ ಚರ್ಚೆಯಾಗಿ ರಾಜ್ಯಾದ್ಯಂತ ಈ ಸರ್ಕಾರದ ವಿರುದ್ಧ ಹೋರಾಟ ಮಾಡತಕ್ಕ ಕಾಲ ಬಂದಿದೆ. ಆದ್ದರಿಂದ ಸರ್ಕಾರದ ನಿಲುವಿನ ಮೇಲೆ ಇದು ನಿಂತಿದೆ. ಸರ್ಕಾರ ಏನು ನೀರು ಬಿಟ್ಟಿದೆ ಅದನ್ನು ತಕ್ಷಣ ನಿಲ್ಲಿಸಿ ತಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡಬೇಕೆಂದು ಒತ್ತಾಯ ಮಾಡುತ್ತಾ, ನನ್ನ ಮಾತು ಮುಗಿಸುತ್ತೇನೆ.

★ **ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):-** ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಬಹಳ ಪ್ರಮುಖವಾದ ವಿಚಾರ ಚರ್ಚೆಯಾಗುತ್ತಿದೆ. ನಿನ್ನೆತಾನೇ ಸರ್ಕಾರದ ಎಲ್ಲಾ ವಿರೋಧ ಪಕ್ಷಗಳ ಮುಖಂಡರ ಸಭೆಯನ್ನು ಕರೆದು ಕಾವೇರಿ ವಿಷಯದ ಬಗ್ಗೆ ಚರ್ಚೆ ಮಾಡಿತ್ತು. ಆ ಚರ್ಚೆಯಲ್ಲಿ ಹಲವಾರು ಅಭಿಪ್ರಾಯಗಳು ಬಂದಿವೆ. ಹೀಗಿರತಕ್ಕ ಸಂದರ್ಭದಲ್ಲಿ ಕಾವೇರಿ ಜನ ವಿವಾದವನ್ನು ಬಗೆಹರಿಸುವುದಕ್ಕೆ ನೀವು ಪ್ರಾಮಾಣಿಕ ಪ್ರಯತ್ನ ಮಾಡಬೇಕು, ಆ ಪ್ರಯತ್ನ ಯಾವ ಯಾವ ರೀತಿ ಇರಬೇಕೆಂಬ ಸಲಹೆ ಸೂಚನೆಗಳು ನಿನ್ನೆಯ ಸಭೆಯಲ್ಲಿ ಬಂದವು. ಅದರಲ್ಲಿ ಇವತ್ತಿನ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಈ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಆ ಸೌಹಾರ್ದಯುತ ವಾತಾವರಣವನ್ನು ನಿರ್ಮಾಣ ಮಾಡಿ ಆ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಆ ರೀತಿ ಪ್ರಯತ್ನ ಮಾಡತಕ್ಕ ಹಂಸದಲ್ಲಿ ಪ್ರಧಾನ ಮಂತ್ರಿಗಳ ಜೊತೆ ಚರ್ಚೆ ಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಆ ಪರಿಸ್ಥಿತಿಯನ್ನು ಅವಲೋಕನ

ಮಾಡಿ ಯಾವ ರೀತಿಯಾಗಿ ತೀರ್ಮಾನ ತೆಗೆದುಕೊಳ್ಳಬೇಕೆಂಬ ವಿಷಯದ ಬಗ್ಗೆ ನಿನ್ನೆ ನಡೆದಂಥ ಸಭೆಯಲ್ಲಿ ಚರ್ಚೆಯಾಯಿತು. ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ ಮಂತ್ರಿಗಳಿಗೆ ಆ ಜವಾಬ್ದಾರಿಯನ್ನು ಕೊಟ್ಟರು. ಪ್ರಧಾನ ಮಂತ್ರಿಗಳ ಜೊತೆ ಮಾತನಾಡಿ ಯಾವ ರೀತಿ ಸಮಸ್ಯೆ ಪರಿಹಾರವಾಗಬೇಕೆಂಬ ಬಗ್ಗೆ ವಿಚಾರವಿನಿಮಯ ಮಾಡುವುದು ಒಂದು. ನಿನ್ನೆ ನಾವು ಸಭೆ ಸೇರಿದಂತಹ ಸಂದರ್ಭದಲ್ಲಿ ಆ ವಿಷಯ ಪ್ರಸ್ತಾಪಕ್ಕೆ ಬಂದಿರಲಿಲ್ಲ ಬಹುಶಃ ಸರ್ಕಾರಕ್ಕೆ ಮತ್ತೆ ಏನಾದರೂ ಆ ಪ್ರಶ್ನೆ ನಿನ್ನೆ ಬಂದಿದ್ದೇ ಅದೇ ನಿನ್ನೆ ಬೆಳಿಗ್ಗೆ ಹೇಗೆ ವಿರೋಧ ಪಕ್ಷಗಳನ್ನು ಕರೆದು ಚರ್ಚೆ ಮಾಡಿದ್ದಿರೋ ಅದೇ ರೀತಿ ಚರ್ಚೆ ಮಾಡಬಹುದಿತ್ತು. ನಿನ್ನೆ ಪ್ರಶ್ನೆ ಇದ್ದದ್ದು ತಮಿಳುನಾಡು ಸರ್ಕಾರದವರು 15 ಟಿಎಂಸಿ ನೀರು ಕೊಡಬೇಕೆಂದು ಸುಪ್ರಿಂ ಕೋರ್ಟಿನಲ್ಲಿ ದಾವೆ ದಾಖಲು ಮಾಡಿದ್ದಾರೆ. ಸುಪ್ರಿಂ ಕೋರ್ಟಿನಲ್ಲಿ ದಾವೆ ದಾಖಲು ಮಾಡಿರತಕ್ಕ ಸಂದರ್ಭದಲ್ಲಿ ನಾವು ಸುಪ್ರೀಂ ಕೋರ್ಟಿಗೆ ಹೋಗಬಾರದು ಎಂದೂ. ಸುಪ್ರೀಂ ಕೋರ್ಟ್ ಅಥವಾ ಟ್ರಿಬ್ಯುನಲ್ ವಿಷಯ ಕೂಡ ನಿನ್ನೆ ಸಭೆಯಲ್ಲಿ ಪ್ರಸ್ತಾಪಕ್ಕೆ ಬಂತು. ಕೊರ್ಟು ಕಾನ್ನೂನು ಕಟ್ಟಲೆಗಳಿಂದ ಈ ಸಮಸ್ಯೆ ಪರಿಹಾರವಾಗುವುದಕ್ಕೆ ಸಾಧ್ಯತೆ ಇಲ್ಲ. ಹಿಂದೆ ಟ್ರಿಬ್ಯುನಲ್‌ನವರಿಂದ 11 ಟಿಎಂಸಿ ನೀರು ಕೊಡಬೇಕೆಂದು ಸೂಚನೆ ಬಂದಂಥ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿಗೆ ತಮಿಳ್ನಾಡು ಸರ್ಕಾರ ಅಪೀಲು ಹಾಕಿದಂತಹ ಸಂದರ್ಭದಲ್ಲಿ ಅದೇ ಸುಪ್ರೀಂ ಕೋರ್ಟು ಅಂದಿನ ಪ್ರಧಾನ ಮಂತ್ರಿಗಳಿಗೆ ಸೂಚನೆ ಕೊಟ್ಟು ನೀವು ಇದರಲ್ಲಿ ಮಧ್ಯೆ ಪ್ರವೇಶ ಮಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಸೂಚನೆ ಕೊಟ್ಟಿದೆ ಅದರ ಅರ್ಥವೇ ಇದು ಸೌಹಾರ್ದಯುತವಾಗಿ ಪರಿಹಾರವಾಗಬೇಕೆಂಬುದು. ಆ ನಿಟ್ಟಿನಲ್ಲಿ ನಮ್ಮ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳ ಜೊತೆ ಮಾತನಾಡಿ ಚರ್ಚೆ ಮಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ನಿನ್ನೆ ಸಲಹೆಗಳು ಬಂದಿವೆ. ಇವತ್ತು ಬಂದಿರತಕ್ಕ ಪ್ರಶ್ನೆ 5 ಟಿ.ಎಂ.ಸಿ. ನೀರು ಹೇಗೆ ಬಿಟ್ಟರು, ಬಿಡತಕ್ಕ ಅವಶ್ಯಕತೆ ಇತ್ತೆ ಎನ್ನುವುದು. ನಿನ್ನೆ ಕೂಡ ಸೂಕ್ಷ್ಮವಾಗಿ ಪರೋಕ್ಷವಾಗಿ ಈ ಪ್ರಶ್ನೆ ಪ್ರಸ್ತಾಪಕ್ಕೆ ಬಂದಿತ್ತು. ಅಂದರೆ, ನಮ್ಮ ಜಲಾನಯನಗಳಲ್ಲಿ ನೀರಿನ ಮಟ್ಟ ಏನಿದೆ ಹೇಗಿದೆ ಎಷ್ಟಿದೆ ಮತ್ತು ಒಂದು ವೇಳೆ ಸುಪ್ರೀಂ ಕೋರ್ಟ್ ನಮಗೆ ನಾಳೆ ದಿವಸ ಆದೇಶ ಕೊಟ್ಟು ಇಷ್ಟು ನೀರು ಕೊಡಿ ಎಂದರೆ, ಕೊಡಲಿಕ್ಕೆ ನಮ್ಮ ಹತ್ತಿರ ನೀರು ಇದೆಯೇ ನಮ್ಮ ಪರಿಸ್ಥಿತಿ ಏನು ಇದೆ ಎಂದು ಹೇಳತಕ್ಕದ್ದು ಮತ್ತು ಸರ್ಕಾರ ಈ ಬಗ್ಗೆ ನಮಗೆ ಮಾಹಿತಿ ಕೊಡಬೇಕಾಗಿತ್ತು. ಮಾಹಿತಿ ಕೊಟ್ಟಿದ್ದರೆ ನಾವು ಅದರ ಬಗ್ಗೆ ಚರ್ಚೆ ಮಾಡಬಹುದಿತ್ತು ಎಂಬ ಪ್ರಶ್ನೆ ಕೂಡ ನಿನ್ನೆ ಸಭೆಯಲ್ಲಿ ಪ್ರಸ್ತಾಪಕ್ಕೆ ಬಂದಿತ್ತು. ಆದರೆ ಇವತ್ತು ನೀರು ಬಿಟ್ಟು ಆಗಿದೆ. ಆದರೆ ನೀರು ಬಿಟ್ಟದ್ದು ನಮ್ಮ ಸರ್ಕಾರಕ್ಕೆ ಕೇಂದ್ರ ಸರ್ಕಾರದ ಒತ್ತಾಯವೋ ಅಥವಾ ಪ್ರಧಾನ ಮಂತ್ರಿಗಳ ಸೂಚನೆಯೋ ಅಥವಾ ಈ ಸಮಸ್ಯೆ ಪರಿಹಾರ ಮಾಡಲಿಕ್ಕೆ ಆ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಲಿಕ್ಕೆ ಬೇಕಾಗಿರತಕ್ಕ ವಾತಾವರಣ ನಿರ್ಮಾಣ ಮಾಡಲಿಕ್ಕೆ ಏನಂದು ಆದರೂ ಸೂಚನೆ ಬಂದಿತ್ತೆ? ಆ ರೀತಿ ಏನಾದರೂ ಸೂಚನೆ ಬಂದಿದ್ದರೆ ನಿನ್ನೆ ಹೇಗೆ ವಿರೋಧ ಪಕ್ಷಗಳನ್ನು ಕರೆದು ಅವರ ಅಭಿಪ್ರಾಯ ಪಡೆದು ಚರ್ಚೆ ಮಾಡಿದಿರೋ ಅದೇ ರೀತಿ ಚರ್ಚೆ ಮಾಡುವುದರಲ್ಲಿ ಯಾವುದೇ ತಪ್ಪಿರಲಿಲ್ಲ. ಏತಕ್ಕೆ ಸರ್ಕಾರ ಆ ಕೆಲಸ ಮಾಡಲಿಲ್ಲ. ಹೋದ ಸಾರಿ ಇದೇ ಸಂದರ್ಭದಲ್ಲಿ 5 ಟಿ.ಎಂ.ಸಿ. ನೀರನ್ನು ಏಕಾಏಕಿಯಾಗಿ ಏಕಪಕ್ಷೀಯವಾಗಿ ಬಿಟ್ಟಂತಹ ಸಂದರ್ಭದಲ್ಲಿ ಇದೇ ಸದನದಲ್ಲಿ ತೀವ್ರಗತಿಯಾದ ಚರ್ಚೆ ವಿಮರ್ಶೆ ಎಲ್ಲ ನಡೆದಿದ್ದು, ಏಕಾಏಕಿಯಾಗಿ

ಬಿಟ್ಟಿದ್ದು ತಪ್ಪಾಗಿದೆ ಎಂದು ಹೋದ ವರ್ಷ ಆಗಿದ್ದ ಅನುಭವದಿಂದಾದರೂ ಇವರು ಪಾಠ ಕಲಿಯಬೇಕಾಗಿತ್ತು. ಈ ವರ್ಷ 5 ಟಿ.ಎಂ.ಸಿ. ನೀರು ಬಿಡತಕ್ಕ ಪ್ರಶ್ನೆ ಬಂದರೆ ವಿರೋಧ ಪಕ್ಷಗಳ ಮತ್ತು ಸಂಬಂಧಪಟ್ಟವರ ಜೊತೆ ಸಮಾಲೋಚನೆ ಮಾಡಿ ಅವರನ್ನೆಲ್ಲ ನಂಬಿಕೆಗೆ ತೆಗೆದುಕೊಂಡು ಈ ಸಮಸ್ಯೆಯನ್ನು ಚರ್ಚೆ ಮಾಡಬಹುದಿತ್ತು. ಆದರೆ ಈ ಕೆಲಸ ಏತಕ್ಕೆ ಸರ್ಕಾರ ಮಾಡಲಿಲ್ಲ? ಸರ್ಕಾರ ಆ ಪ್ರಯತ್ನವನ್ನು ಮಾಡದೇ ಇರುವ ಕಾರಣಕ್ಕೋಸ್ಕರ ಇವತ್ತು ಈ ಸಮಸ್ಯೆ ಬಂದಿದೆ. ಮತ್ತು ಇಲ್ಲಿ ಮೊದಲಿನಿಂದಲೂ ಕೂಡ ನೀರನ್ನು ಬಿಡತಕ್ಕ ಪರಿಪಾಠ ಇದೆ. ನಾಲ್ಕೈದು ವರ್ಷಗಳ ಹಿನ್ನೆಲೆಯನ್ನು ನೋಡಿದರೂ ಕೂಡ ಪ್ರತಿ ಜುಲೈ ತಿಂಗಳಲ್ಲಿ ನೀರು ಬಿಡುತ್ತಿದ್ದಾರೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮಲ್ಲಿ ನೀರಿಲ್ಲ ಎಂದು ನಿನ್ನೆ ಮುಖ್ಯ ಮಂತ್ರಿಗಳು ಏತಕ್ಕೆ ಹೇಳಬೇಕಾಗಿತ್ತು? ನಿನ್ನೆ ನೀರಿಲ್ಲ ಎಂದು ಹೇಳಿ ಇವತ್ತು ಬಿಟ್ಟಿದ್ದೇವೆ ಎಂದು ಹೇಳಿದರೆ ಇದು ಅನುಮಾನಕ್ಕೆ ಎಡೆಮಾಡಿಕೊಡುವಂಥ ವಿಷಯ ಆಗಿದೆ. ಆದ್ದರಿಂದ ಸರ್ಕಾರ ಕೂಡ ಯಾವ ಸಂದರ್ಭದಲ್ಲಿ ಅವರಿಗೆ ನೀರು ಬಿಡಬೇಕಾಗಿ ಬಂತು, ಏತಕ್ಕೆ ನೀರು ಬಿಡಬೇಕಾಗಿ ಬಂತು, ಅಂಥ ಅನಿವಾರ್ಯ ಪರಿಸ್ಥಿತಿ ಏನು ಬಂದಿತ್ತು ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಅದರ ಬಗ್ಗೆ ಚರ್ಚೆ ಮಾಡಿ ಅದನ್ನು ಸೌಹಾರ್ದಯುತವಾಗಿ ಯಾವುದೇ ರೀತಿಯಲ್ಲಿ ಭಾವೋದ್ವೇಗಕ್ಕೆ ಒಳಗಾಗದ ರೀತಿಯಲ್ಲಿ ಎರಡೂ ರಾಜ್ಯಗಳ ಮತ್ತು ನಮ್ಮ ದೇಶದ ಹಿತದೃಷ್ಟಿಯಿಂದ ಈ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳಬೇಕು. ಪರಿಹಾರ ಮಾಡಿಕೊಳ್ಳದಿದ್ದರೆ ನಿರಂತರವಾಗಿ ಇದು ಚರ್ಚೆಯ ವಿಷಯವಾಗಿ ಮತ್ತು ಹಲವಾರು ರಾಜಕೀಯ ಲಾಭನಷ್ಟಗಳ ದೃಷ್ಟಿಯಿಂದ ನೋಡತಕ್ಕ ಪ್ರಶ್ನೆ ನಮ್ಮ ರಾಜ್ಯದಲ್ಲಿ ಪ್ರತಿವರ್ಷ ನೋಡುತ್ತಾ ಇದ್ದೇವೆ. ಅದಕ್ಕೆ ದಯವಿಟ್ಟು ಸರ್ಕಾರ ಅವಕಾಶ ಮಾಡಿಕೊಡಬಾರದು. ಆ ರಾಜಕೀಯ ಲಾಭನಷ್ಟಗಳ ದೃಷ್ಟಿಯಿಂದ ಈ ಸಮಸ್ಯೆಯನ್ನು ನೋಡಬಾರದು. ಮತ್ತು ಬೀದಿಗಳಲ್ಲಿ ಇದನ್ನು ಪರಿಹಾರ ಮಾಡಲಿಕ್ಕೆ ಸಾಧ್ಯ ಇಲ್ಲ. ಸರ್ಕಾರ ಸ್ಪಷ್ಟವಾಗಿ ಯಾವ ಕಾರಣಕ್ಕೋಸ್ಕರ ನೀರು ಬಿಡಬೇಕಾಗಿ ಬಂತು, ಯಾವ ಹಿನ್ನೆಲೆಯಲ್ಲಿ ನೀರು ಬಿಟ್ಟಿದ್ದಾರೆ, ಅಂಥ ಪರಿಸ್ಥಿತಿ ಏನಾಗಿತ್ತು ಎಂಬುದನ್ನು ಹೇಳಿ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಸದನ ನಡೆಯುತ್ತಾ ಇದೆ. ವಿರೋಧಪಕ್ಷಗಳ ಸಭೆಯನ್ನು ನಿನ್ನೆ ರಾತ್ರಿಯೇ ಕರೆಯಬಹುದಾಗಿತ್ತು. ಅಥವಾ ಇವತ್ತು 10 ಗಂಟೆಗೆ ಬಿಡುವುದಕ್ಕಿಂತ ಮೊದಲು ಬೆಳಿಗ್ಗೆ 8 ಗಂಟೆಗೆ ಸಭೆ ಕರೆಯಬಹುದಾಗಿತ್ತು. ಇದನ್ನು ಏನೂ ಮಾಡದೆ ಏಕಾಏಕಿಯಾಗಿ ಸರ್ಕಾರವೇ ಈ ಸಮಸ್ಯೆ ಉಲ್ಬಣವಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ನಾಳೆ ದಿವಸ ಯಾರು ಬೀದಿಯಲ್ಲಿ ಇಳಿಯುತ್ತಾರೆ, ಯಾರು ಹೋಗುತ್ತಾರೆ ಅನ್ನತಕ್ಕ ಪ್ರಶ್ನೆಯಲ್ಲ. ಸರ್ಕಾರ ತನ್ನ ಎಚ್ಚರಿಕೆ ತಪ್ಪಿದಂಥ ನಡವಳಿಕೆಯಿಂದಾಗಿ, ಇವತ್ತು ಸರ್ಕಾರವೇ ಹಲವಾರು ಸಮಸ್ಯೆಗಳನ್ನು ಸೃಷ್ಟಿ ಮಾಡಿ ಜನರು ಬೀದಿಗೆ ಬರತಕ್ಕ ಪರಿಸ್ಥಿತಿ ಬಂದಿದೆ. ಆದ್ದರಿಂದ ಸರ್ಕಾರ ಪರಿಸ್ಥಿತಿ ಏನಿದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಅದರ ಬಗ್ಗೆ ಸ್ಪಷ್ಟವಾದ ಮತ್ತು ಗಂಭೀರವಾದ ಚರ್ಚೆಯಾಗಬೇಕು. ಈ ಸಮಸ್ಯೆ ಪರಿಹಾರಕ್ಕೆ ಇವತ್ತು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರ ತಮಿಳುನಾಡಿನ ಸರ್ಕಾರ ಎಲ್ಲ ಸರ್ಕಾರಗಳೂ ಒಂದು ಕಡೆ ಕುಳಿತು ಮಾತನಾಡುವುದಕ್ಕೆ ಅವಕಾಶ ಇದೆ. ಅಂಥ ಅವಕಾಶವನ್ನು ತಪ್ಪಿಸಬಾರದು. ಇಂಥ ಅವಕಾಶ ಮತ್ತೆ ನಮಗೆ ಸಿಗುವುದು ಕಷ್ಟ ಇದೆ. ಈಗ ಪ್ರಧಾನ ಮಂತ್ರಿಗಳಾಗಿರುವವರಿಗೆ ಸಮಸ್ಯೆ ಸ್ಪಷ್ಟವಾಗಿ ಗೊತ್ತಿದೆ. ಅವರಿಗೆ ಆಳವಾಗಿ ಗೊತ್ತಿದೆ. ತಮಿಳುನಾಡಿನಲ್ಲಿ ಸರ್ಕಾರ ಬದಲಾಗಿದೆ. ಇಲ್ಲಿ ಸರ್ಕಾರದವರು ಸಮಸ್ಯೆಯನ್ನು

ಎದುರಿಸುತ್ತಿದ್ದೇವೆ. ಇಂಥ ಒಂದು ವಾತಾವರಣ ಉಪಯೋಗಿಸಿಕೊಂಡು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಬೇಕಾಗಿರತಕ್ಕ ವಾತವರಣವನ್ನು ನಾವೆಲ್ಲರೂ ಸೇರಿ ನಿರ್ಮಾಣ ಮಾಡಬೇಕಾಗುತ್ತದೆ. ಯಾವುದೇ ಭಾವೋದ್ವೇಗಕ್ಕೆ ಒಳಗಾಗದ ರೀತಿಯಲ್ಲಿ ನಾವೆಲ್ಲಾ ಚರ್ಚೆ ಮಾಡಬೇಕಾಗುತ್ತದೆ. ಆ ಚರ್ಚೆಗೆ ಬೇಕಾಗಿರತಕ್ಕ ಎಲ್ಲಾ ಸಂಬಂಧಪಟ್ಟ ವಿಷಯಗಳನ್ನು ಸರ್ಕಾರ ತಿಳಿಸಬೇಕು ಎಂದು ಹೇಳಿ ನಾನು ಸರ್ಕಾರವನ್ನು ಒತ್ತಾಯ ಮಾಡಿ, ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತಿದ್ದೇನೆ.

★**ಶ್ರೀ ಕೆ.ಎನ್.ನಾಗೇಗೌಡ(ಭಾರೀ ನೀರಾವರಿ ಮಂತ್ರಿಗಳು):-** ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಹಾಗೂ ಇತರೆ ಪಕ್ಷಗಳ ನಾಯಕರುಗಳು ಗಂಭೀರವಾದಂಥ ಕಾವೇರಿ ವಿಚಾರವನ್ನು ಚರ್ಚೆ ಮಾಡಿದ್ದು ಸೂಕ್ತವೆಂದು ನಾನು ಭಾವಿಸುತ್ತೇನೆ. ಇದನ್ನು ಎಷ್ಟು ಗಂಭೀರವಾಗಿ ಗೋಪ್ಯವಾಗಿಡುತ್ತೇವೆ ಅಷ್ಟೂ ಸಮಸ್ಯೆಗಳು ಜಾಸ್ತಿಯಾಗುತ್ತದೆ ಎನ್ನತಕ್ಕಂಥದ್ದು ನನ್ನ ಅನಿಸಿಕೆ. ಈ ದೃಷ್ಟಿಯಲ್ಲಿ ಚರ್ಚೆಗೆ ಪ್ರಿಲಿಮಿನರಿ ಸಬ್ ಮಿಷನ್ ಅವಕಾಶ ಕೊಟ್ಟಿದ್ದು ಕೂಡ ಸೂಕ್ತ. ಚರ್ಚೆಯಾಗಿ ಹೆಚ್ಚು ವಿಚಾರಗಳು ಜನರಿಗೂ ತಿಳಿಯಬೇಕಾಗಿದೆ, ಈ ಸದನಕ್ಕೂ ತಿಳಿಯಬೇಕಾಗಿದೆ. ವಿಚಾರ ತಿಳಿದಾಗ ಗೊಂದಲ ಕಡಮೆಯಾಗುತ್ತದೆ ಎನ್ನತಕ್ಕಂಥದ್ದು ನನ್ನ ಅನಿಸಿಕೆ. ಆ ದೃಷ್ಟಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಪಕ್ಷಗಳ ನಾಯಕರುಗಳು ಪ್ರಾಸ್ತಾವಿಕವಾಗಿ ಮಾಡಿರತಕ್ಕ ವಿಚಾರಗಳು ಮೂರು ನಾಲ್ಕು. ನೀರನ್ನು ಬಿಡತಕ್ಕ ಸಂದರ್ಭ ಏನಿತ್ತು ಎನ್ನುವುದು ಒಂದು ವಿಚಾರ. ಎರಡನೇ ವಿಚಾರ, ನಮಗೇ ನೀರಿಲ್ಲ, ಬೇರೆಯವರಿಗೆ ನೀರು ಕೊಟ್ಟಿದ್ದೀರಲ್ಲ, ನಮಗೆ ನೀರು ಇದೆಯೋ ಇಲ್ಲವೋ ಎಂಬುದು. ಮೂರನೇ ವಿಚಾರ, ನ್ಯಾಯ ಮಂಡಳಿ ಅಸ್ತಿತ್ವದಲ್ಲಿಲ್ಲ; ಇಂಥ ಸಂದರ್ಭದಲ್ಲಿ ಒಂದು ಮಾತುಕತೆಗೆ ಏನಾದರೂ ಕೂಡ ಅವಕಾಶ ಮಾಡಿಕೊಡುವುದಕ್ಕೆ ಈ ಸಂದರ್ಭವನ್ನು ರಾಜ್ಯ ಸರ್ಕಾರ ಹುಡುಕಿಕೊಂಡಿದೆ ಎಂಬುದು. ನಾಲ್ಕನೇ ವಿಚಾರ, ವಿರೋಧ ಪಕ್ಷಗಳ ಸಭೆಯನ್ನು ಬೆಳಿಗ್ಗೆ ಕರೆದಿದ್ದಿರಿ. ಮತ್ತೊಂದು ಸಾರಿ ಕರೆದು ಮಾತನಾಡಬಹುದಾಗಿತ್ತಲ್ಲ, ಸದನವನ್ನು ಕಾನ್ ಫಿಡೆನ್ಸ್‌ಗೆ ತೆಗೆದುಕೊಳ್ಳಬಹುದಿತ್ತಲ್ಲ ಎಂಬುದು. ಹೀಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ನಾನು ಪೂರ್ವಭಾವಿಯಾಗಿ ನಮ್ಮ ರಿಸರ್ವಾಯರ್‌ನಲ್ಲಿರತಕ್ಕ ಪೊಸಿಷನ್ನನ್ನು ತಿಳಿಸಿದರೆ ಚರ್ಚೆ ಮಾಡುವುದಕ್ಕೆ ಬಹಳ ಅನುಕೂಲವಾಗುತ್ತದೆ.

ಅಧ್ಯಕ್ಷರು:- ನಾನು ಏನು ಹೇಳುತ್ತೇನೆ ಅಂದರೆ, ಅವರು ನಿಲುವಳಿ ಸೂಚನೆಗೆ ನೋಟೀಸ್ ಕೊಟ್ಟಿದ್ದಾರೆ. ಕ್ವೆಶ್ಚನ್ ಹವರ್‌ಗೆ ಮೊದಲೇ ಪ್ರಸ್ತಾಪ ಮಾಡಬೇಕು, ಇದು ಬಹಳ ಗಂಭೀರವಾದ ವಿಚಾರ ಎಂದು ಹೇಳಿದರು. ಆಯಿತು. ಅದನ್ನೇ ಒಂದು ಪ್ರತಿಷ್ಠೆಯ ವಿಚಾರ ಮಾಡಿಕೊಂಡು ಸದನದಲ್ಲಿ ಗದ್ದಲ ಆಗಬಾರದು ಎನ್ನುವ ದೃಷ್ಟಿಯಿಂದ ಆಯಿತು ತಾವು ಹೇಳಿ ಎಂದು ನಾನು ಹೇಳಿದೆ. ತಾವು ಮತ್ತು ನಾಯಕರು ಚರ್ಚೆ ಮಾಡಿ ನೀವು ಡಿಟೇಲ್ಸ್ ಕೊಡತಕ್ಕದ್ದು, ನೀರು ಎಷ್ಟಿದೆ, ಏತಕ್ಕೆ ಬಿಟ್ಟಿರತಕ್ಕಂಥಕದ್ದು, ಅವರು ಎತ್ತಿರತಕ್ಕ ಎಲ್ಲಾ ವಿಚಾರಗಳಿಗೆ ಉತ್ತರ ಕೊಡತಕ್ಕದ್ದನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳೋಣ ಎಂದು ನೀವು ಅಭಿಪ್ರಾಯಪಡುತ್ತೀರೋ ಅಥವಾ ಹೇಗೆ ಮಾಡೋಣ. ಒಂದು ಐದು ನಿಮಿಷ ನಾವು ಅಡ್ಜರ್ನ್ ಮಾಡಿ ಹೇಗೆ ಮಾಡಬೇಕು ಎಂದು ಹೇಳುತ್ತೀರೋ? ಏಕೆಂದರೆ ನನಗೆ ಇದೊಂದು ಹೊಸ ಸಂಪ್ರದಾಯವೇ ಆಗಿ ಬಿಟ್ಟಿದೆ. ಪ್ರತಿ ದಿವಸ ಕ್ವೆಶ್ಚನ್ ಹವರನ್ನು ನಾನು

ಅವಾಯಿಡ್ ಮಾಡಿಕೊಂಡು ಕ್ವೆಶ್ಚನ್ ಹವರ್‌ಗೆ ಮೊದಲೇ ಡಿಸ್ಕಷನ್‌ಗೆ ಹೌಸ್‌ನಲ್ಲಿ ತೆಗೆದುಕೊಳ್ಳತಕ್ಕದ್ದು ಇದು ಆಕ್ಚುಯಲ್ ಹೊಸ ಪದ್ಧತಿಯೇ ಆಗಿಬಿಡುತ್ತದೆ. ಎಂಥ ಸಂದರ್ಭದಲ್ಲಿಯೂ ಕೂಡ ನಾವು ಸಾಮಾನ್ಯವಾಗಿ ಕ್ವೆಶ್ಚನ್ ಹವರನ್ನು ಕೈಬಿಡುವುದಿಲ್ಲ. ಕ್ವೆಶ್ಚನ್ ಹವರನ್ನು ಮುಗಿಸಿ ಅನಂತರ ಚರ್ಚೆಗೆ ತೆಗೆದುಕೊಳ್ಳತಕ್ಕದ್ದು. ಏಕಾಏಕಿ ನೀವು ಇಲ್ಲಿ ಹೇಳುವ ಬದಲು ಬೇಕಾದರೆ ಹತ್ತು ನಿಮಿಷ ಸಭೆಯನ್ನು ಮುಂದಕ್ಕೆ ಹಾಕೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ಇದು ವಿಶೇಷವಾದ ಸಂದರ್ಭ ಇದ್ದ ಕಾರಣ ಇದನ್ನು ಚರ್ಚೆಗೆ ತೆಗೆದುಕೊಳ್ಳಿ. ಪದೇ ಪದೇ ನಾವೂ ಕೂಡ ಇದನ್ನು ಕೇಳುವುದಿಲ್ಲ. ಅವರೂ ಕೂಡ ಒಪ್ಪಿದ್ದಾರೆ. ಏಕೆಂದರೆ . . . . . ಮಾನ್ಯ ಮಂತ್ರಿಗಳೂ ಕೂಡ ಒಪ್ಪಿದ್ದಾರೆ.

ಅಧ್ಯಕ್ಷರು:- ಪ್ರತಿ ದಿವಸ ಒಂದೊಂದು ವಿಶೇಷವಾದಂಥ ಗಂಭೀರವಾದಂಥ ಒಂದು ಸ್ಥಿತಿ ಉದ್ಭವವಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ:- ರಾಜ್ಯ ಸರ್ಕಾರ ಆ ರೀತಿ ಉದ್ಭವ ಮಾಡುತ್ತಿದೆ.

ಅಧ್ಯಕ್ಷರು:- ಈಶ್ವರಪ್ಪನವರೇ, ದಯಮಾಡಿ ಕುಳಿತುಕೊಳ್ಳಿ. ಒಂದೊಂದು ದಿವಸ ಒಂದೊಂದು ಪರಿಸ್ಥಿತಿ ಉದ್ಭವವಾಗುತ್ತದೆ. ಸಾಮಾನ್ಯವಾಗಿ ಪದ್ಧತಿ ಏನೆಂದರೆ, ಅಧ್ಯಕ್ಷರು ಬಂದು ಸ್ಥಾನದಲ್ಲಿ ಕುಳಿತುಕೊಂಡ ತಕ್ಷಣ ಏನೇ ಇದ್ದರೂ ಕೂಡ ಕ್ವೆಶ್ಚನ್ ಹವರನ್ನು ಪ್ರಾರಂಭ ಮಾಡಿಬಿಡುತ್ತಾರೆ. ನಾನು ಅಷ್ಟು ರಿಜಿಡ್ ಆಗಿ ರೂಲ್ಸ್‌ಗೆ ಅಂಟಿಕೊಳ್ಳದೆ ಕ್ವೆಶ್ಚನ್ಸ್ ಇದ್ದರೂ ಕೂಡ ತಾವು ಹೇಳುವುದಕ್ಕೆ ಪ್ರಯತ್ನಪಟ್ಟಾಗ ಏತಕ್ಕೆ ನಾನು ಕೇಳುತ್ತೇನೆ ಅಂದರೆ ಅದೇ ಒಂದು ದೊಡ್ಡ ಸಮಸ್ಯೆಯಾಗಬಾರದು, ಆ ಕಾರಣದಿಂದ ಗದ್ದಲ ಆಗಬಾರದು ಎನ್ನತಕ್ಕ ದೃಷ್ಟಿ. ನಮಗೆ ಇರತಕ್ಕ ಸಮಯ, 29 ವರ್ಕಿಂಗ್ ಡೇಸ್ ಏನು ಸಿಕ್ಕಿದೆ ಇದರಲ್ಲಿ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಮಾಡಿ ನಾವು ಏನು ಪ್ರೊಗ್ರಾಮನ್ನು ಹಾಕಿಕೊಂಡಿದ್ದೇವೆ, ಅದನ್ನು ಸಕ್ರಿಯವಾಗಿ ಈ ವರ್ಷವಾದರೂ ನಡೆಸಿಕೊಂಡು ಹೋಗಬೇಕು ನಮಗೆ ಡಿಮ್ಯಾಂಡ್ಸ್‌ಗೆ ಇಟ್ಟುಕೊಂಡಿರತಕ್ಕ ಟೈಮ್ ವ್ಯರ್ಥವಾಗಬಾರದು ಎಂದು ಹೇಳಿ ನಾನು ಅಕಾಮೆಡಿಟೀವಾಗಿ ಹೋಗುತ್ತಿದ್ದೇನೆ. ಏಕೆಂದರೆ. ಏನಿದ್ದರೂ ಕೂಡ ಚರ್ಚೆ ಮುಖಾಂತರ ನಾವು ಪರಿಹರಿಸಿಕೊಳ್ಳೋಣ; ಸದನದಲ್ಲಿ ಒಂದು ರೀತಿಯ ಉದ್ವಿಗ್ನ ವಾತಾವರಣ ಉಂಟಾಗಬಾರದು ಎನ್ನತಕ್ಕಂಥದ್ದು ನನ್ನ ಅಪೇಕ್ಷೆ. ಆದ್ದರಿಂದ ನಾನು ಏನು ಹೇಳುತ್ತೇನೆ ಅಂದರೆ, ಹತ್ತು ನಿಮಿಷ ಅಡ್ಜರ್ನ್ ಮಾಡಬೇಕು ಅಂದರೆ ಮಾಡುತ್ತೇನೆ. ತಾವು, ನಾಯಕರು ಎಲ್ಲಾ ಚರ್ಚೆ ಮಾಡಿಕೊಳ್ಳಿ. ಅಥವಾ ನನ್ನಲ್ಲಿ ಬಂದು ಚರ್ಚೆ ಮಾಡುತ್ತೇನೆ ಅಂದರೂ ಸಂತೋಷ. ಕ್ವೆಶ್ಚನ್ ಹವರನ್ನು ಕೈಬಿಡಬೇಕೇ ಅಥವಾ ಅದನ್ನು ಅಲ್ಲೇ ಮಾತನಾಡಿಕೊಂಡು ಅವರೊಂದು ಹೇಳಿ ಮತ್ತೆ ಇವರೊಂದು ಹೇಳುವುದು ಬೇಡ. ಈಗಾಗಲೇ ನಾವು ಒಂದು ಗಂಟೆಯನ್ನು ಕಳೆದಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- 'ಇಲ್ಲ. ಈಗಾಗಲೇ ಅವರು ಒಪ್ಪಿರುವುದರಿಂದ ಆಮೇಲೆ ಇದು ಗಂಭೀರವಾದ ಪ್ರಶ್ನೆ ಇರುವುದರಿಂದ ತೆಗೆದುಕೊಳ್ಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಚರ್ಚೆ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು:- ಕಾಗೋಡು ತಿಮ್ಮಪ್ಪನವರೆ, ನಿಮ್ಮ ಮಾತುಗಳನ್ನು ಅವರ ಬಾಯಲ್ಲಿ ಹಾಕುವುದು ಬೇಡ. ತಾವು ಏನು ಮಾತನಾಡುತ್ತೀರಿ ಅವರೇನು ಮಾತನಾಡುತ್ತಾರೆ ಎನ್ನುವುದು ನನಗೆ

ಅರ್ಥವಾಗುತ್ತದೆ. ಅವರು ಎಲ್ಲಾ ವಿಚಾರವನ್ನೂ ಚರ್ಚೆ ಮಾಡುವುದಕ್ಕೆ ಸಿದ್ಧ ಇದ್ದೇನೆ ಎಂದು ಹೇಳಿದರು. ಕ್ವೆಶ್ಚನ್ ಹವರನ್ನು ಮುಂದೆ ಹಾಕಿ ಈಗ ತೆಗೆದುಕೊಳ್ಳಿ ಎಂದು ಹೇಳಿದರೆ?

ಶ್ರೀ ಕೆ.ಎನ್.ನಾಗೇಗೌಡ:- ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಚರ್ಚೆಗೆ ಈಗಲೂ ಸಿದ್ಧ ಇದ್ದೇವೆ ಎಂದು.

ಅಧ್ಯಕ್ಷರು:- ಒಂದು ನಿಮಿಷ, ಸಭಾನಾಯಕರು ಏನೂ ಹೇಳುತ್ತಾರೆ ಕೇಳೋಣ. ತಾವೆಲ್ಲಾ ಇಷ್ಟು ಹೊತ್ತು ಮಾತನಾಡಿದರಲ್ಲ ಈಗ ಅವರ ಮಾತನ್ನು ಕೇಳೋಣ.

ಶ್ರೀ ವಾಟಾಳ್ ನಾಗರಾಜ್:- ನಾನು ಮುಖ್ಯ ಮಂತ್ರಿಗಳಿಗೆ ಸಹಾಯವಾಗಲಿ ಎಂದು ಹೇಳುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಅಧ್ಯಕ್ಷರೇ, ಸದನದಲ್ಲಿ . . . . . .

ಅಧ್ಯಕ್ಷರು:- ವಾಟಾಳರು ಏನೋ ನಿಮಗೆ ಸಹಾಯ ಮಾಡಿ ಮಾತನಾಡುತ್ತಾರಂತೆ. ಅದೂ ಒಂದು ಆಗಿ ಹೋಗಲಿ.

ಶ್ರೀ ವಾಟಾಳ್ ನಾಗರಾಜ್:- ಮಾತುಮಾತಿಗೂ ನೀವು ಈ ತರಹ ಮಾತನಾಡುವುದರಿಂದ ನನಗೂ ಸ್ವಲ್ಪ ನೋವಾಗುತ್ತದೆ.

ಅಧ್ಯಕ್ಷರು:- ಇಲ್ಲ. ಒಳ್ಳೆ ಕಥೆ ಆಯಿತಲ್ಲಾ. ನೀವು ಸಂತೋಷವಾಗಿದ್ದರೆ ನಾನು ಇಲ್ಲಿ ಸುಖವಾಗಿ ಕುಳಿತಿರುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಒಂದು ಹೇಳುತ್ತೇನೆ ಕೇಳಿ. ಈಗ ನೀರಾವರಿ ಸಚಿವರು ಚರ್ಚೆಯನ್ನು ಪ್ರಾರಂಭ ಮಾಡಿದರು. ವಿರೋಧ ಪಕ್ಷಗಳು ಒಂದು, ಎರಡು, ಮೂರು ಈ ತರಹ ಎಲ್ಲಾ ಹೇಳಿದ್ದೀರಿ. ಆದರೆ ಇದು ಸಮಗ್ರವಾಗಿ ಚರ್ಚೆಯಾಗಲಿ. ಮೊದಲನೇ ಚರ್ಚೆ ರಿಸವಾರ್ಯರ್‌ನಲ್ಲಿ ಎಷ್ಟೆಷ್ಟು ನೀರಿದೆ ಎಂದು ಪ್ರಾರಂಭ ಮಾಡಿದರು. ಅಂದರೆ ಚರ್ಚೆ ಪ್ರಾರಂಭ ಆಯಿತು. ಪ್ರಾರಂಭದಲ್ಲಿ ತಾವು ಏನು ಮಾಡಿದಿರಿ ಎಂದರೆ, ಈ ಸಂಪ್ರದಾಯವನ್ನು ಬದಲಾವಣೆ ಮಾಡುವುದು ಬೇಡ ಎಂದು ಹೇಳಿದಿರಿ. ಅದನ್ನು ಒಪ್ಪೋಣ. ನಿಮ್ಮ ಮಾತಿಗೆ ನಾನು ದ್ವನಿಗೂಡಿಸುತ್ತೇನೆ. ಆದರೆ ಒಂದು ಪ್ರಶ್ನೆ ಇರತಕ್ಕದ್ದು, ಸಮಗ್ರ ಚರ್ಚೆ ಒಂದು ಕಡೆ. ಇವತ್ತು ಬೆಳಿಗ್ಗೆ 10 ಗಂಟೆಗೆ ನೀರು ಬಿಟ್ಟಿರಲ್ಲ ಅದರ ಬಗ್ಗೆ ಕೂಡಲೇ ಸ್ಪಷ್ಟಪಡಿಸಿ. ಮಿಕ್ಕ ಸಮಗ್ರ ಚರ್ಚೆ ಇಡೀ ಭೂತಾಕಾರವಾಗಿ ಕಾವೇರಿ ಬಗ್ಗೆ ಚರ್ಚೆ ಆಮೇಲೆ ಮಾಡೋಣ. ಯಾರನ್ನೂ ಹೇಳದೆ ಕೇಳದೆ ಸದನವನ್ನು ಕಡೆಗಣಿಸಿ, ವಿರೋಧ ಪಕ್ಷದವರನ್ನು ಕಡೆಗಣಿಸಿ ಈಗ ನೀರು ಏತಕ್ಕೆ ಬಿಟ್ಟೀರಿ? ಇಷ್ಟಕ್ಕೆ ನಿಲ್ಲೋಣ. ಮಿಕ್ಕಿದ್ದಕ್ಕೆ ಆಮೇಲೆ ಹೋಗೋಣ ನಾವು.

ಅಧ್ಯಕ್ಷರು:- ಸಭಾನಾಯಕರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ಮುಕ್ತವಾಗಿ ಚರ್ಚೆಯಾಗಬೇಕೆನ್ನುವುದು ಒಪ್ಪಿಕೊಳ್ಳುವ ವಿಚಾರ. ಆದರೆ ಸದನದಲ್ಲಿ ಕೆಲವು ವಿವರಗಳನ್ನು ಕೊಡುವುದು ರಾಜ್ಯದ ಹಿತದೃಷ್ಟಿಯಿಂದ ಸರಿಯಲ್ಲ. ಆ ಕಾರಣಕ್ಕೋಸ್ಕರ ಮಾನ್ಯ ಅಧ್ಯಕ್ಷರು ಸಲಹೆ ಕೊಟ್ಟಹಾಗೆ, ತಮ್ಮನ್ನೆಲ್ಲ ಕರೆಸಿ ಏಕೆ ಕೇಳಲಿಲ್ಲವೆಂದು ಈಗ ಮಾನ್ಯ ರೆಡ್ಡಿಯವರು ಹೇಳಿದರು. ಈಗ ಏಕೆ ಆಗಲಿಲ್ಲವೆನ್ನುವುದನ್ನು ಹೇಳುತ್ತೇನೆ. ಬೇಕಾದರೆ ನಾವು ಸೇರೋಣ. ಎಲ್ಲ ವಿರೋಧ ಪಕ್ಷದ

ನಾಯಕರು ನಮ್ಮ ಸರ್ಕಾರದ ವತಿಯಿಂದ ನಾವು ಬರುತ್ತೇವೆ ಮಾತನಾಡುತ್ತೇವೆ. ಎಂತಹ ಸಂದರ್ಭವಿತ್ತು, ಏನಿದೆ ಅಥವಾ ಈಗ ಏನಿದೆ ಅಥವಾ ಮುಂದೆ ಏನಾಗುತ್ತದೆನ್ನುವುದರ ಬಗ್ಗೆ ತಮ್ಮ ಕೊಠಡಿಯಲ್ಲಿ ಸೇರಿ ಮಾತನಾಡೋಣ. ಅದರ ನಂತರ ಚರ್ಚೆ ಅವಶ್ಯಕತೆ ಇದ್ದರೆ ಮಾಡೋಣ ಇಲ್ಲದಿದ್ದರೆ ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಒಂದು ಸ್ಪಷ್ಟೀಕರಣ ನಮಗೆ ಬೇಕು ಸ್ವಾಮಿ. ಒಳಗೆ ಹೋಗಿ ಚರ್ಚೆ ಮಾಡೋಣ ಗೌಪ್ಯವಾಗಿರುವುದನ್ನು ರಾಜ್ಯದ ಜನರಿಗೆ ಹೇಳಬೇಕಾದ್ದನ್ನು ಇಲ್ಲಿಯೇ ಚರ್ಚೆ ಮಾಡಬೇಕಾಗುತ್ತದೆ. ಅದನ್ನು ಮುಚ್ಚಿಟ್ಟು ಮಾತನಾಡಲಿಕ್ಕೆ ಬರುವುದಿಲ್ಲ, ಜನ ನಮ್ಮನ್ನು ತಪ್ಪು ತಿಳಿದುಕೊಳ್ಳುತ್ತಾರೆ. ಏಕೆಂದರೆ ಈಗ ನಮಗೇನು ಬೇಕು ತಮ್ಮಿಂದ ಅದರೆ, 5 ಟಿ.ಎಂ.ಸಿ. ನೀರನ್ನು ಈಗ ಬಿಟ್ಟಿದ್ದಿರೋ ಇಲ್ಲವೋ, ಬಿಡುವುದಕ್ಕೆ ಯಾವಾಗಿನಿಂದ ಹೇಳಿದ್ದೀರಿ, ಇಷ್ಟು ಇಲ್ಲಿ ಹೇಳಿದರೆ ಅದು ರೆಕಾರ್ಡ್‌ಗೆ ಹೋಗಲಿ. ನಮಗೆ ಇಷ್ಟು ಬೇಕು. ಏಕೆ ಅಂತಹ ಸಂದರ್ಭ ಬಂತು, ಪ್ರಧಾನ ಮಂತ್ರಿಗಳಿಂದ ಯಾವ ರೀತಿಯಿಂದ ಒತ್ತಾಯ ಬಂತು, ನಾಲ್ಕು ಗಂಟೆಯ ಮೇಲೆ ಏಕೆ ತೀರ್ಮಾನ ತೆಗೆದುಕೊಂಡಿರಿ, ಅದನ್ನು ಆಮೇಲೆ ಚರ್ಚೆ ಮಾಡೋಣ. ಜನ ಏನು ಅಂದುಕೊಳ್ಳುತ್ತಾರೆ?

ಅಧ್ಯಕ್ಷರು:- ಮಾನ್ಯ ಯಡಿಯೂರಪ್ಪನವರೇ, ದಯಮಾಡಿ ನನ್ನ ಮಾತು ಕೇಳಿ. That becomes regular discussion. Should I allow that discussion suspending the Question Hour?

ಶ್ರೀ ಬಿ.ಎಸ್.ಯಡಿಯೂರಪ್ಪ:- ಇಲ್ಲ, ತಮ್ಮ ತೀರ್ಪಿಗೆ ನಾವು ಮನ್ನಣೆ ಕೊಡುತ್ತೇವೆ. ನಾವೀಗ ಇಂತಹ ಪ್ರಮುಖವಾದ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವಂತಹ ಅಗತ್ಯವಿರಲಿಲ್ಲ. ಈ ರಾಜ್ಯದ ಜನರಿಗೆ ಗೊತ್ತಾಗಬೇಕು, 5 ಟಿ.ಎಂ.ಸಿ. ನೀರನ್ನು ಬಿಟ್ಟಿದ್ದೀರೋ ಅಥವಾ ಇಲ್ಲವೋ, ಬಿಡುವುದಕ್ಕೆ ಆಜ್ಞೆ ಮಾಡಿದ್ದೀರೋ ಇಲ್ಲವೋ? ಈಗ ಅಷ್ಟೇ ಬೇಕಾಗಿರುವುದು, ಉಳಿದದ್ದು ಒಳಗಡೆ ಚರ್ಚೆ ಮಾಡಿ, ಆಮೇಲೆ ಇಲ್ಲಿ ಮಾಡೋಣ.

ಅಧ್ಯಕ್ಷರು:- ಮಾನ್ಯ ಯಡಿಯೂರಪ್ಪನವರೇ ನಾನು ಹೇಳುವುದನ್ನು ಕೇಳಿ, ಅದನ್ನೆ ಅವರು ಏಕೆ ಬಿಟ್ಟರು, ಬಿಟ್ಟಿದ್ದಾರೋ ಇಲ್ಲವೋ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಏಕೆ ಬಿಟ್ಟರು ಅದನ್ನು ನಾವು ಕೇಳುತ್ತಿಲ್ಲ. ಬಿಟ್ಟಿದ್ದಾರೋ ಇಲ್ಲವೋ, ಅಷ್ಟೇ ಸಾಕು ನಮಗೆ.

ಅಧ್ಯಕ್ಷರು:- ದಯಮಾಡಿ ನಾನು ಹೇಳುವುದನ್ನು ಪೂರ್ತಿ ಕೇಳಿ. ಆ ಎಲ್ಲ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ 10 ನಿಮಿಷ ನೀವು ಬರುವುದಾದರೆ, ಅವರು ಒಪ್ಪಿಕೊಳ್ಳುವುದಾದರೆ ನಾನು ಕ್ವೆಶ್ಚನ್ ಹವರ್ ಸಸ್ಪೆಂಡ್ ಮಾಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾವು ರೆಡಿ ಇದ್ದೇವೆ. ನಾವು ಬರುತ್ತೇವೆ ಸ್ವಾಮಿ. ಪತ್ರಿಕಾ ವರದಿಯ ಆಧಾರದ ಮೇಲೆ ನಾವು ಇವತ್ತು ಮಾತನಾಡುತ್ತಿದ್ದೇವೆ. ನಮಗೇನು ಸುದ್ದಿ ಇದೆ ಎಂದರೆ ಜನತಾದಳ ಶಾಸಕಾಂಗ ಪಕ್ಷದ ಸಭೆಯಲ್ಲಿ ಕಬಿನಿಯಿಂದ 3,500 ಕ್ಯೂಸೆಕ್ಸ್ ನೀರನ್ನು ಬಿಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೀರಿ ಎಂದು ಬಂದಿದೆ. ತೀರ್ಮಾನ ತೆಗೆದುಕೊಂಡಿದ್ದೇವೆ, ಇನ್ನು ಆದೇಶ ಕೊಟ್ಟಿಲ್ಲವೆಂದರೆ ಚರ್ಚೆ ಮಾಡುವುದಕ್ಕೆ ಬರುವುದಕ್ಕೆ ನಾವು ರೆಡಿ ಇದ್ದೇವೆ. 5 ಟಿ.ಎಂ.ಸಿ. ನೀರನ್ನು

ಬಿಟ್ಟು ಆಗಿದೆಯೆಂದರೆ ನಮಗೆ ಚರ್ಚೆ ಮಾಡುವಂತಹ ಅಗತ್ಯವಿಲ್ಲ. ನೀರನ್ನು ಬಿಟ್ಟಿದ್ದಿರೋ ಇಲ್ಲವೋ ಎಂದು ಹೇಳಿ ಚರ್ಚೆಗೆ ಹೋಗೋಣ. ಸಂದರ್ಭವನ್ನು ನೀವು ಹೇಳಬೇಡಿ. ಯಾವ ವಿಶೇಷ ಸಂದರ್ಭ, ಯಾವ ಒತ್ತಡಕ್ಕೆ ಬಂದಿರಿ ಎನ್ನುವುದನ್ನು ನೀವು ಹೇಳಬೇಡಿ.

ಶ್ರೀ ಜೆ.ಹೆಚ್.ಪಟೇಲ್:- ಇದರ ಬಗ್ಗೆ ಯಾವುದೇ ಚರ್ಚೆಯನ್ನು ನಾವು ಅಲ್ಲಿ ಮಾಡುವುದು ರಾಜ್ಯದ ಹಿತದೃಷ್ಟಿಯಿಂದ. ಸರ್ಕಾರ ಉಳಿಸಿಕೊಳ್ಳುವುದಕ್ಕೆ ಇನ್ನೊಬ್ಬರನ್ನು ಯಾರನ್ನೊ ಉಳಿಸುವುದಕ್ಕೆ ಅಲ್ಲ. ತಾವೆಲ್ಲ ಏನು ಹೇಳಿದಿರಿ ಎಂದರೆ ರಾಜ್ಯದ ಹಿತದೃಷ್ಟಿಯಿಂದ ನಾವೇನು ತೀರ್ಮಾನ ತೆಗೆದುಕೊಳ್ಳಬೇಕೆಂದು. ಆ ದೃಷ್ಟಿಯಿಂದಲೇ ಹೇಳುವುದು ಬನ್ನಿ ಚರ್ಚೆ ಮಾಡೋಣವೆಂದು. ನೀರು ಬಿಟ್ಟಿದ್ದಿರೋ ಇಲ್ಲವೋ? ಅಂದರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ:- ಬಿಡದೇ ಹೋಗಿದ್ದರೆ ಆ ಚರ್ಚೆಯ ಸ್ವರೂಪವೇ ಬೇರೆಯಾಗುತ್ತದೆ. ಈಗ ಹಾಲಿ ತಾವು ನೀರನ್ನು ಬಿಟ್ಟಿದ್ದಿರೋ ಇಲ್ಲವೋ?

ಅಧ್ಯಕ್ಷರು:- ಅದೇ ಚರ್ಚೆಗೆ ಯಾವ ಸ್ವರೂಪ ಕೊಡೋಣವೆಂದು ಚರ್ಚೆ ಮಾಡೋಣ ಅಲ್ಲಿಗೆ ಬನ್ನಿಯೆಂದು ಕರೆದೆ.

ಶ್ರೀ ಕಾಗೋಡು ತಿಮ್ಮಪ್ಪ:- ಇದಕ್ಕೇನು ಚರ್ಚೆ ಸಾರ್? ಒಂದು ವೇಳೆ ನೀರೇ ಬಿಡದೆ ಹೋಗಿದ್ದರೆ ನಾವು ಇಷ್ಟೆಲ್ಲ ಚರ್ಚೆ ಮಾಡಬೇಕಾದ ಅಗತ್ಯವಿಲ್ಲ.

ಶ್ರೀ ಜೆ.ಹೆಚ್.ಪಟೇಲ್:- ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗದೆ ಇರತಕ್ಕ ವಿಷಯಗಳನ್ನು ನಾನು ತಿಳಿಸುತ್ತೇನೆಂದು ಹೇಳಿದೆ. ಇದಕ್ಕಿಂತ ದೊಡ್ಡದು ಯಾವುದೂ ಇಲ್ಲ. I know the importance of Assembly. ಆದರೆ ಇಲ್ಲಿ ಹೇಳುವುದರಿಂದ ರಾಜ್ಯದ ಹಿತಕ್ಕೆ ಧಕ್ಕೆಯಾಗತಕ್ಕ ವಾತಾವರಣವಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ರಾಜ್ಯದ ಜನರಿಗೆ ನೀರು ಬಿಟ್ಟಿದ್ದು ಗೊತ್ತಾಗುತ್ತದೆ. ಅದನ್ನು ಮುಚ್ಚಿಡುವುದಕ್ಕೆ ಆಗುವುದಿಲ್ಲ. ಈ ರಾಜ್ಯದ ಜನರಿಗೆ ಧಕ್ಕೆಯಾಗುವುದಿಲ್ಲ. ಅಲ್ಲಿ ಕುರ್ಚಿಗೆ ಇಲ್ಲಿ ಕುರ್ಚಿಗೆ ಧಕ್ಕೆಯಾಗಬಹುದು. ಅದರ ಬಗ್ಗೆ ನಾವು ಚಿಂತೆ ಮಾಡುತ್ತಿಲ್ಲ. ನಾವು ಚಿಂತೆ ಮಾಡುವುದು ರಾಜ್ಯದ ಜನರ ಹಿತದೃಷ್ಟಿಯಿಂದ . ದಯಮಾಡಿ ಕ್ಷಮಿಸಿ, ದಯಮಾಡಿ ಇಲ್ಲಿ ಸ್ಪಷ್ಟಪಡಿಸಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ರಾಜ್ಯ ಹಿತದೃಷ್ಟಿಯಿಂದ ಯಾವ್ಯಾವ ಮಾತುಗಳನ್ನು ತಮ್ಮ ಕೊಠಡಿಯಲ್ಲಿ ಹೇಳಬಹುದು ಅದನ್ನು ಹೇಳಲಿ ನಾವು ಕೇಳುತ್ತೇವೆ. ನೀರು ಬಿಟ್ಟಿದ್ದಂತೂ ಕಣ್ಣಿಗೆ ಕಾಣುತ್ತದೆಯಲ್ಲ, ಅಲ್ಲಿ ಅದು ತಮಿಳುನಾಡು ರಿಸರ್ವ್‌ವಾಯರ್‌ಗೆ ಮೆಟ್ಟೂರ್ ಡ್ಯಾಂನಲ್ಲಿ ಹೋಗಿ ತುಂಬಬೇಕು. ಅದಂತು ಎಲ್ಲರಿಗೂ ಕಾಣುತ್ತದೆ. ನೀವು ಹೇಳದಿದ್ದರೂ ಕೂಡ ಪ್ರತ್ಯಕ್ಷವಾಗಿ ನೀರು ಬಿಟ್ಟ ನೀರು ಕೆ.ಆರ್.ಸಾಗರ್, ಕಬಿನಿ, ಹೇಮಾವತಿ, ಹಾರಂಗಿ ಡ್ಯಾಮ್ ಯಾವುದರಿಂದ ಬಿಟ್ಟರೂ ಕೂಡ ಅಲ್ಲಿರತಕ್ಕ ಲಕ್ಷಾಂತರ ಜನ ನೋಡಿರುತ್ತಾರೆ. ಅದು ಏನು ಮುಚ್ಚಿಡುವುದು ಇದೆ? ಅದಕ್ಕೇನು ಸೀಕ್ರೆಸಿ ಇದೆ? ನೀರು ಬಿಟ್ಟಿದ್ದೇವೆ ಇಲ್ಲ? ಅದನ್ನು ನೀವು ಸ್ಪಷ್ಟಪಡಿಸಬೇಕು. ಉಳಿದ ಮಾತು ಏನಾದರೂ ಇದ್ದರೆ ಅದನ್ನು ಅಲ್ಲಿ ಕುಳಿತು ಮಾತನಾಡೋಣ. ಆಮೇಲೆ ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ ಅಧ್ಯಕ್ಷರೆ, ತಮ್ಮ ಸಲಹೆ ಸೂಕ್ತವಾಗಿದೆ. ತಾವೇನು ಹೇಳಿದ್ದೀರಿ ಎಂದರೆ, ಸಮಗ್ರವಾಗಿ ಏನು ಚರ್ಚೆ ಮಾಡಬೇಕೆಂಬುದನ್ನು ನನ್ನ ಕೊಠಡಿಯಲ್ಲಿ ಕುಳಿತು ಚರ್ಚೆಗೆ ಹೋಗೋಣವೆನ್ನತಕ್ಕದ್ದು. ಅದು ಸೂಕ್ತ ನಾನು ಒಪ್ಪುತ್ತೇನೆ. ಆದರೆ ನಾವಿಲ್ಲಿ ಪೂರ್ವಭಾವಿಯಾಗಿ ಈ ಕಾರಣದಿಂದ ಈಗ ನಿಲುವಳಿ ಸೂಚನೆ ತೆಗೆದುಕೊಳ್ಳಬೇಕು ಎಂದು ಹೇಳಿ ತಮ್ಮನ್ನು ಮನವರಿಕೆ ಮಾಡಿ ನಿಲುವಳಿ ಸೂಚನೆಗೆ ಒಪ್ಪಿಸುವುದಕ್ಕೆ ನಾವೆಲ್ಲರೂ ಪ್ರಯತ್ನ ಪಟ್ಟಿದ್ದೇವೆ.

ಅಧ್ಯಕ್ಷರು:- ಈಗ ನೀವು ಮಾಡಿದ್ದು ಪ್ರಿಲಿಮಿನರಿ ಸಬ್‌ಮಿಷನ್ ಅಲ್ಲ. ನಾವು ಕ್ವೆಶ್ಚನ್ ಅವರನ್ನು ಸಸ್ಪೆಂಡ್ ಮಾಡಬೇಕೇ ಬೇಡವೇ ಎನ್ನತಕ್ಕದ್ದು, ನೀವು ಬಹಳ ಆತಂಕದಲ್ಲಿದ್ದೀರಲ್ಲ ಅದಕ್ಕೆ ಏನು ಹೇಳುತ್ತೀರಿ ಹೇಳಿಯೆಂದು. I have not allowed preliminary submission. ಪ್ರಿಲಿಮಿನರಿ ಸಬ್‌ಮಿಷನ್‌ಗೆ ಬರುವುದಕ್ಕೆ ನಾನು ಅನುಮತಿ ಕೊಟ್ಟ ಮೇಲೆ ನೀವು ಬರುವುದು. ಕ್ವೆಶ್ಚನ್ ಅವರ್ ಬೇಡ ಬಹಳ ಗಂಭೀರವಾದ ವಿಚಾರವೆಂದು ಹೇಳಿದ್ದಕ್ಕೆ ಏನು ಹೇಳುತ್ತೀರಿ ಹೇಳಿ ಎಂದೆ. ಆದರೆ ನಾನು ಹೇಳದಿರುವುದನ್ನು ತಾವು ದಯವಿಟ್ಟು ನನ್ನ ಬಾಯಲ್ಲಿ ಹಾಕುವುದು ಬೇಡ.

ಶ್ರೀ ವಾಟಾಳ್ ನಾಗರಾಜ್:- ಆಯಿತು ಸ್ವಾಮಿ, ನಾನು ಆಕಸ್ಮಾತ್ ಅಂದಿದ್ದರೆ ದಯವಿಟ್ಟು ಸರ್ವತಾ ಕ್ಷಮಿಸಿ. ನಾನು ಕ್ಷಮಾಪಣೆಯನ್ನು ಕೇಳುತ್ತೇನೆ.

ಅಧ್ಯಕ್ಷರು:- ನೀವು ಕ್ಷಮಾಪಣೆ ಏಕೆ ಕೇಳಬೇಕು ನೀವು?

ಶ್ರೀ ವಾಟಾಳ್ ನಾಗರಾಜ್:- ಹೋಗಲಿ, ತಾವು ಈ ಪ್ರಶ್ನೆಯನ್ನು ಎತ್ತಲಿಕ್ಕಾದರೂ ಅವಕಾಶ ಕೊಟ್ಟಿದ್ದೀರಲ್ಲ. ನಮ್ಮ ಪ್ರಶ್ನೆ ಮುಗಿದ ನಂತರ ಸಂಬಂಧಪಟ್ಟ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಕೊಟ್ಟಿರಿ. ಅವರು ಉತ್ತರ ಕೊಡುವ ಸಂದರ್ಭದಲ್ಲಿ ಸವಿಸ್ತಾರವಾದ ಉತ್ತರವನ್ನು ಕೊಡುವುದಕ್ಕೆ ಅವರು ಹೊರಟಾಗ, ನಾವು ತಮಗೆ ಏನು ಮನವರಿಕೆಯನ್ನು ಮಾಡಿದೆವು ಅಂದರೆ ಸವಿಸ್ತಾರ ಚರ್ಚೆ ಪ್ರಶ್ನೆ ಆಮೇಲೆ. ಈಗ ಸೀಮಿತವಾದ ಪ್ರಶ್ನೆ ಏನೆಂದರೆ, ನೀವು 5 ಟಿ.ಎಂ.ಸಿ. ನೀರನ್ನು ಕಬಿನಿಯಿಂದ ಬಿಟ್ಟಿದ್ದೀರೋ ಇಲ್ಲವೆ? ಎರಡೇ ಪ್ರಶ್ನೆ. ಕಬಿನಿಯಿಂದ ಬಿಟ್ಟಿದ್ದೇವೆ ಎಂದರೆ ಬಿಟ್ಟಿದ್ದೇವೆಂದು ಹೇಳಿ, ಬಿಟ್ಟಿಲ್ಲವೆಂದರೆ ಬಿಟ್ಟಿಲ್ಲವೆಂದು ಹೇಳಿ. ಎರಡೇ ಪ್ರಶ್ನೆ. ಅದಕ್ಕೆ ಸೀಮಿತ, ಅಷ್ಟೇ ಹೊರತು ಸಮಗ್ರ ಚರ್ಚೆಯ ಬಗ್ಗೆ ಏನು ಮಾಡಬೇಕು. ಯಾವ ರೀತಿ ಚರ್ಚೆಗೆ ತೆಗೆದುಕೊಳ್ಳಬೇಕು, ಈ ಚರ್ಚೆಯಲ್ಲಿ ಯಾವ ಪದಗಳನ್ನು ಉಪಯೋಗಿಸಬೇಕು, ಏನೇನು ಭಾಷಣ ಮಾಡಬೇಕೆಂಬುದನ್ನು ತಮ್ಮ ಕಾರ್ಯಾಲಯದಲ್ಲಿ ನಾವು ಮಾತನಾಡೋಣ. ಆದರೆ ಈಗ ನೀರು ಬಿಟ್ಟಿದ್ದಾರೋ ಇಲ್ಲವೋ ನೀರು ಬಿಟ್ಟಿಲ್ಲವೆಂದರೆ, ನಿಜ. ನೀರು ಬಿಟ್ಟಿಲ್ಲ ಮುಂದೆ ಏನು ಮಾಡಬೇಕು, ನೀರು ಬಿಟ್ಟಿದ್ದೇವೆಂದರೆ ನಾವೇನು ಮಾಡಬೇಕೆನ್ನುವುದು ನಿರ್ಧಾರವಾಗುತ್ತದೆ. ಅದಕ್ಕೋಸ್ಕರ ತಮ್ಮನ್ನು ಕೇಳುತ್ತೇವೆ.

ಶ್ರೀ ಜಿ.ಹೆಚ್.ಪಟೇಲ:- ನೀರನ್ನು ಗೌಪ್ಯವಾಗಿ ಬಿಡುವುದಕ್ಕಾಗುವುದಿಲ್ಲ. ನೀರನ್ನು ಬಿಟ್ಟಿದ್ದೇವೆ. ಇಷ್ಟು ನೀರು ಇವತ್ತು ಬಿಟ್ಟಿದ್ದೇವೆ, ಇಷ್ಟು ನೀರನ್ನು ನಾಳೆ ಬಿಡುತ್ತೇವೆ ಎಂದು ಅದರ ವಿವರ ಹೇಳುವುದಕ್ಕೆ ನಾನು ನಿಮ್ಮನ್ನು ಕರೆಯುತ್ತಿದ್ದೇನೆ. ನಾವು ಮಾತನಾಡಿದ ಮೇಲೆ ಅವಶ್ಯಕತೆ ಇದ್ದರೆ ಚರ್ಚೆ ಮಾಡೋಣ. ಚರ್ಚೆಗೆ ನಾನು ಹಿಂಜರಿಯುವುದಿಲ್ಲ. ಅವಶ್ಯಕತೆ ಬೀಳಲಾರದು. ಚರ್ಚೆಯನ್ನು ಮಾಡಲೇಬಾರದು ಅಥವಾ ಈ ವಿಷಯ ಹೇಳುವುದೇ ಇಲ್ಲವೆಂದು ಹೇಳಿದ್ದೇನೋ? I have to

come before you because all of you are equally interested in safeguarding the interest of the State. ಕೇವಲ ನಮ್ಮ ಸರ್ಕಾರದ್ದು ಅಷ್ಟೇ ಅಲ್ಲ. ಅದಕ್ಕೋಸ್ಕರ ಬನ್ನಿ ಅರ್ಧ ಗಂಟೆ ಚರ್ಚೆ ಮಾಡಿದರೆ ಅಂತಹ ಅಪಘಾತವೇನೂ ಆಗುವುದಿಲ್ಲವೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೆ, ತಾವು ಪ್ರಶ್ನೆಯ ವೇಳೆಯನ್ನು ಸ್ವಲ್ಪ ಸಮಯ ಬದಿಗೊತ್ತಿ ಇಂತಹ ಗಂಭೀರವಾದಂತಹ ವಿಚಾರವನ್ನು ಎತ್ತಲಿಕ್ಕೆ ಅವಕಾಶ ಕೊಟ್ಟಿದ್ದು ವಿಶೇಷವಾದ ಪ್ರಸಂಗದಲ್ಲಿ ಬಹಳ ಮಹತ್ವದ್ದು. ಮಾನ್ಯ ಸಭಾನಾಯಕರು, ಮುಖ್ಯ ಮಂತ್ರಿಗಳು ಅವರೇನು ಹೇಳಿದ್ದಾರೆ ಎಂದರೆ, ರಾಜ್ಯದ ಹಿತದೃಷ್ಟಿಯಿಂದ ಕೆಲವು ವಿಚಾರಗಳನ್ನು ನಾವು ಇವತ್ತು ಈ ಸದನದಲ್ಲಿ ಹೇಳಲಿಕ್ಕೆ ಆಗುವುದಿಲ್ಲ. ವಿರೋಧ ಪಕ್ಷಗಳ ನಾಯಕರನ್ನು ಕರೆದು ಚರ್ಚೆ ಮಾಡಬೇಕಾಗುತ್ತದೆ ಎಂದು ಹೇಳಿದರು. ಇದು ತತ್ವಶಃ ನಾವು ಒಪ್ಪಲೇಬೇಕಾದ ವಿಚಾರ. ಆದರೆ ಇಲ್ಲಿ ನಮ್ಮ ಮುಂದೆ ಬಂದಿರತಕ್ಕ ಪ್ರಶ್ನೆ ಏನೆಂದರೆ, ಇವತ್ತು ತಾವು ನೀರನ್ನು ಬಿಡಲಿಕ್ಕೆ ಆದೇಶ ಕೊಟ್ಟಿದ್ದೀರಿ ಎಂದು ಒಂದು ರೀತಿ ನಾವು ತಿಳಿದುಕೊಳ್ಳಬೇಕಾಗುತ್ತದೆ. ನೀರನ್ನು ಬಿಡಲಿಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದರೆ ಅಲ್ಲಿ ನೀರು ಹರಿಯುತ್ತಿದ್ದರೆ ಅದರಿಂದ ರಾಜ್ಯದ ಹಿತದೃಷ್ಟಿಗೆ ಅಘಾತವಾಗುತ್ತದೆನ್ನುವುದೇ ನಮ್ಮ ಪ್ರಶ್ನೆ. ತಾವು ದಯಮಾಡಿ ಒಂದು ವಿಚಾರ ಮಾಡಬೇಕು. ಇಲ್ಲಿ ತೀವ್ರವಾದ ಆಕ್ಷೇಪವಿದೆ. ನಿನ್ನೆ ತಾನೇ ನೀರಿಲ್ಲವೆಂದು ಹೇಳಿ, ಇವತ್ತು ಅಲ್ಲಿ ಏನು ಮಳೆ ಬಂದು ನೆರೆ ಬಂದಿದೆಯೋ? ಈಗಲೇ ನೀರು ಬಿಡಲಿಕ್ಕೆ? ಅದಾದರೂ ಹೇಳಿ. ಅಲ್ಲಿ ನೆರೆ ಬಂದು ಬಿಟ್ಟಿತು ನೀರು ಬಂದಿದೆ, ಆದ್ದರಿಂದ ನಾವು ಬಿಟ್ಟಿದ್ದೇವೆಂದು ಹೇಳಿದರೆ ಅದಕ್ಕೆ ಅರ್ಥವಿದೆ. ತಾವು ಮಾತು ಆಡುವುದಕ್ಕೆ ನಮ್ಮದು ಆಕ್ಷೇಪಣೆ ಇಲ್ಲ. ಆದರೆ ತಾವು ಆದೇಶ ಕೊಟ್ಟಿದ್ದರೆ ತಕ್ಷಣ ಮಾತುಕತೆಯಾಗುವವರೆಗಾದರೂ ಕೂಡ ಇಲ್ಲಿಂದ ತಾವು ಆದೇಶ ಕೊಡಬೇಕು ನೀರನ್ನು ನಿಲ್ಲಿಸಬೇಕೆಂದು. ಹಾಗೆ ಇದ್ದರೆ ನಾವು ಮಾತುಕತೆಗೆ ಬರುತ್ತೇವೆ. ಏಕೆಂದರೆ ಒಂದೊಂದು ನಿಮಿಷ ಕೂಡ. . . . .

ಅಧ್ಯಕ್ಷರು:- ಆಯಿತು, ನೀವೆಲ್ಲ ಷರತ್ತುಗಳನ್ನು ಹಾಕುತ್ತಾ ಇದ್ದೀರಿ. ನಾನು ಕ್ವೆಶ್ಚನ್ ಅವರ್ ಶುರು ಮಾಡುತ್ತೇನೆ. As per the rules, I am taking up the Question Hour.

ಶ್ರೀ ಎಂ.ವೀರಪ್ಪ ಮೊಯಿಲಿ:- ಅಂದರೆ ಅಲ್ಲಿ ನೀರು ಹರಿಯುತ್ತಲೇ ಇರಬೇಕು.

(ಗೊಂದಲ)

(ಸಭೆಯಲ್ಲಿ ಅತೀವ ಗೊಂದಲ. ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ತೊಡಗಿದರು)

ಅಧ್ಯಕ್ಷರು:- . . . . . .ಡಾ। ಕರ್ಕಿಯವರ ಪ್ರಶ್ನೆ. ನಂತರ ಶ್ರೀ ಡಿ.ಆರ್.ಪಾಟೀಲ್, ಕೆ.ಎಸ್.ಈಶ್ವರಪ್ಪ ಪ್ರಶ್ನೆ ಕೇಳುವುದಿದ್ದರೆ ಕೇಳಿ. ನಂತರ ಶ್ರೀ ಬಿ.ಶಿವರಾಮು, ಶ್ರೀ ರಾಮಲಿಂಗಾ ರೆಡ್ಡಿ ಪ್ರಶ್ನೆ ಕೇಳುವುದಿದ್ದರೆ ಪ್ರಶ್ನೆ ಕೇಳಿ. ಇಲ್ಲದಿದ್ದರೆ ಇಲ್ಲ ಎಂದು ಹೇಳಿ ಅಷ್ಟೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಧ್ಯಕ್ಷರೆ. . . . . .

(ಗೊಂದಲ ನಡುವೆಯೂ ಮಾನ್ಯ ಅಧ್ಯಕ್ಷರು ಹೆಸರುಗಳನ್ನು ಓದುವುದನ್ನು